







# ಹರ್ಷಿತ್ ಮಂಜುನಾತ್

## ಕ್ರಿಕೆಟ್ ಆಟದ ಬರಹಗಳು







https://honalu.net

# ಮುನ್ನುಡಿ

ನನಗೆ ಬರೆಯುವ ಗೀಳು ಎಳವೆಯಿಂದ ಇದ್ದರೂ, ಅದನ್ನು ಎಲ್ಲರೊಂದಿಗೆ ಹಂಚಿಕೊಳ್ಳಲು ಸರಿಯಾದ ವೇದಿಕೆಯೊಂದು ಬೇಕಿತ್ತು. ಆ ಹೊತ್ತಿಗೆ ನನ್ನ ಕಯ್ ಹಿಡಿದದ್ದು ಹೊನಲು. ಬರಿ ಹಾಳೆಗಳಲ್ಲಿ ಉಳಿಯುತ್ತಿದ್ದ ನನ್ನ ಬರಹಗಳನ್ನು ಸಾವಿರಾರು ಓದುಗರ ಮುಂದಿಟ್ಟಿದ್ದು ಹೊನಲು ಮಿಂಬಾಗಿಲು.

ಎಲ್ಲಾ ಬಗೆಯ ಬರಹಗಳನ್ನು ಬರೆಯುವ ಬಯಕೆ ನನ್ನದಾದರೂ, ದಾಂಡಾಟದ (Cricket) ಬಗೆಗಿನ ಬರಹಗಳು ನನ್ನ ನೆಚ್ಚಿನವು. ಎಳವೆಯಿಂದಲೂ ಆಡಿಕೊಂಡು ಬಂದ ದಾಂಡಾಟದ ಕುರಿತ ಬರಹಗಳನ್ನು ಬರೆಯುವುದು ತೊಡಕಿನ ಸಂಗತಿಯೇನೂ ಆಗಲಿಲ್ಲ. ಹಾಗಾಗಿಯೇ ದಾಂಡಾಟ ಬೆಳೆದು ಬಂದ ಬಗೆ, ಚೆಂಡು ತಯಾರಿಸುವ ಬಗೆ, ಎಸೆತಗಾರಿಕೆ ಕುರಿತಂತೆ ದಾಂಡಾಟದ ಬಗೆಗಿನ ಬರಹಗಳನ್ನು ಹೊನಲುವಿನಲ್ಲಿ ಮೂಡಿಸಲಾಗಿತ್ತು.

ಹೀಗೆ ಹೊನಲಿನಲ್ಲಿ ಮೂಡಿಬಂದ ದಾಂಡಾಟದ ಬರಹಗಳನೆಲ್ಲಾ ಒಟ್ಟು ಸೇರಿಸಿ, ಹೊನಲು ತಂಡ ಒಂದು ಕಿರು ಹೊತ್ತಗೆಯನ್ನು ಹೊರ ತರಲು ಹೊರಟಿರುವುದು ನಿಜಕ್ಕೂ ನಲಿವಿನ ಸಂಗತಿ. ಸದಾ ಬರಹಗಾರರ ಬೆನ್ನು ತಟ್ಟುತ್ತಾ, ಹೊಸ ಹೊಸ ಬಗೆಯ ಬರಹಗಳನ್ನು ಮೂಡಿಸುತ್ತಾ, ಕನ್ನಡದಲ್ಲಿ ಹೊಸತನವನ್ನು ಕಟ್ಟ ಹೊರಟಿರುವ ಹೊನಲುವಿಗೆ ಸವಿ ನಲವರಿಕೆಗಳು.

**ಹರ್ಶಿತ್ ಮಂಜುನಾತ್**

**ಬೆಂಗಳೂರು**

## ತಿಳಿಸುವಿಕೆ:

ಈ ಹೊತ್ತಗೆಯಲ್ಲಿರುವ ಎಲ್ಲಾ ಬರಹಗಳ ಹಕ್ಕುಗಳು ಬರಹಗಾರರು ಮತ್ತು ಹೊನಲು ತಂಡಕ್ಕೆ ಸೇರಿವೆ. ಬರಹಗಳ ಆಯ್ದ ಬಾಗವನ್ನು ಇಲ್ಲವೇ ಇಡೀ ಬರಹವನ್ನು ಬೇರೆ ಕಡೆ ಬಳಸಿಕೊಳ್ಳಲು ಬಯಸುವವರು ಬರಹದಲ್ಲಿ ಇಲ್ಲವೇ ಲಿಪಿಯಲ್ಲಿ ಯಾವುದೇ ಮಾರ‍್ಪಾಡುಗಳನ್ನು ಮಾಡದೇ, ಬರಹಗಾರರ ಹೆಸರನ್ನು ಮತ್ತು ಹೊನಲು ಮಿಂಬಾಗಿಲಿನಿಂದ (honalu.net) ಪಡೆದುಕೊಳ್ಳಲಾಗಿದೆ ಎಂದು ತಿಳಿಸುತ್ತಾ ಬಳಸಿಕೊಳ್ಳಬಹುದು. ಬರಹಗಳಲ್ಲಿ ಬಳಸಿರುವ ಚಿತ್ರಗಳ ಸೆಲೆಗಳನ್ನು ಆಯಾ ಬರಹದ ಕೆಳಗಡೆ ಕೊಡಲಾಗಿದ್ದು, ಅವುಗಳ ಹಕ್ಕುಗಳು ಆ ಸೆಲೆಗಳದ್ದಾಗಿರುತ್ತದೆ.

**ಮುಂಪುಟ ಕಟ್ಟಣೆ** : ಅನ್ನದಾನೇಶ್ ಸಂಕದಾಳ

**ಹೊರಹೊಮ್ಮಿಕೆ** : 12/04/2017

**ಮಿಂಬಲೆಯ ವಿಳಾಸ** : https://honalu.net/

**ಮಿಂಚೆ** : minche@honalu.net

# ಒಳನೋಟ


ಕ್ರಿಕೆಟ್ ಬಗ್ಗೆ ಹೆಚ್ಚಿನವರು ಕೇಳಿರದ 14 ಸಕ್ಕತ್ ಸಂಗತಿಗಳು! ........ 1

ಹೊನಲು ಬೆಳಕಿನ ಟೆಸ್ಟ್ ಕ್ರಿಕೆಟ್ ........ 8

ಕ್ರಿಕೆಟ್ ಚೆಂಡನ್ನು ತಯಾರಿಸುವ ಬಗೆ ........ 11

ಸೋಲರಿಯದ ಇಂಡಿಯಾ, ಗೆಲುವು ಕಾಣದ ಪಾಕ್ ........ 15

ಕ್ರಿಕೆಟ್ ವಿಶ್ವಕಪ್: ಒಂದು ಕಿರುನೋಟ ........ 22

ಕ್ರಿಕೆಟ್ ಆಟದ ಕೆಲವು ತಿರುವುಗಳು ........ 26

ಕ್ರಿಕೆಟ್ ಎಸೆತಗಾರಿಕೆಯ ಗುಟ್ಟು ........ 29

ಎಸೆತದೆಣಿಕೆಯ ಎಡವಟ್ಟು ........ 33

ಹುತ್ತರಿಯ ಮುಂದೆ ಕಾಲು – ಹುಮುಂಕಾ (LBW) ........ 36

# ಕ್ರಿಕೆಟ್ ಬಗ್ಗೆ ಹೆಚ್ಚಿನವರು ಕೇಳಿರದ 14 ಸಕ್ಕತ್ ಸಂಗತಿಗಳು!



**1) ದಾಂಡಾಟ ಮಕ್ಕಳಾಟವಂತೆ**

ನಿಮಗೆ ಗೊತ್ತಿರಬಹುದು, ದಾಂಡಾಟ ಇಂದು ಜಗತ್ತಿನ ಹೆಸರಾಂತ ಆಟಗಳಲ್ಲಿ ಎರಡನೇ ಜಾಗದಲ್ಲಿದೆ. ಆದರೆ ಎರಡು ನೂರೇಡುಗಳ ಹಿಂದೆ ಇಂಗ್ಲೆಂಡ್ ನಲ್ಲಿ ದಾಂಡಾಟ ಹುಟ್ಟಿಕೊಂಡಾಗ ಅದು ಮಕ್ಕಳಾಡುತ್ತಿದ್ದ ಆಟವಂತೆ. ನಮ್ಮಲ್ಲಿ ಮಕ್ಕಳು ಗೋಲಿ, ಚಿನ್ನಿದಾಂಡು ಆಡುವಂತೆ ಅಲ್ಲಿನವರಿಗೆ ದಾಂಡಾಟ. ಮುಂದೆ ಇದು ಚಿಕ್ಕವರಿಂದ ದೊಡ್ಡವರ ವರೆಗೆ ಆಡುವ ನೆಚ್ಚಿನ ಆಟವಾಗಿ ಬೆಳೆದು ಬಂದಿರುವ ಪರಿ ಈಗ ಹಳಮೆ.

**2) ಐ.ಸಿ.ಸಿ ಬರುವುದಕ್ಕಿಂತ ಮುಂಚೆಯೇ ದಾಂಡಾಟದ ಕಾನೂನುಗಳು ಬಳಕೆಯಲ್ಲಿದ್ದವು**

ಈಗ ನಾಡು ನಾಡುಗಳ ನಡುವಣ ದಾಂಡಾಟದ ಆಗುಹೋಗುಗಳನ್ನು ನೋಡಿಕೊಳ್ಳುತ್ತಿರುವುದು ಮತ್ತು ದಾಂಡಾಟದ ಕಾನೂನುಗಳನ್ನು ಕಾಪಾಡಿಕೊಂಡು ನೋಡಿಕೊಳ್ಳುತ್ತಿರುವ ಐ.ಸಿ.ಸಿ. (ಇಂಟರ್ ನ್ಯಾಶನಲ್ ಕ್ರಿಕೆಟ್ ಕೌನ್ಸಿಲ್) ಹುಟ್ಟಿಕೊಂಡಿದ್ದು 1909ರಲ್ಲಿ, ಮತ್ತು ಇದರ ಹಿಂದಿನ ಹೆಸರು ಇಂಪೇರಿಯಲ್ ಕ್ರಿಕೆಟ್ ಕಾನ್ಪರೆನ್ಸ್ ಎಂದು. ಆದರೆ ಇದಕ್ಕೂ ಮೊದಲೇ, ಅಂದರೇ 1788ರಲ್ಲಿ ದಾಂಡಾಟದ ಕಾನೂನುಗಳನ್ನು ಕಟ್ಟಿಕೊಳ್ಳಲಾಗಿತ್ತು.

* ನಿಮಗೆ ಗೊತ್ತಿರಲಿ, ಎಲ್ಲಾ ಆಟಗಳಲ್ಲೂ 'ನಿಯಮ'(Rules)ವನ್ನು ಅಳವಡಿಸಿಕೊಂಡರೆ ದಾಂಡಾಡದಲ್ಲಿ ಮಾತ್ರ 'ಕಾನೂನು'(Laws)ಗಳನ್ನು ಬಳಸುತ್ತಾರೆ.

**3) ಸಚಿನ್ ತೆಂಡೂಲ್ಕರ್ ಇಂಡಿಯಾಕ್ಕೂ ಮೊದಲು ಪಾಕಿಸ್ತಾನದ ಪರ ಆಡಿದ್ದರು!**




ನಿಜ. 1987ರಲ್ಲಿ ಬ್ರೇಬರ್ನ್ ಅಂಗಳದಲ್ಲಿ ಇಂಡಿಯಾ ಮತ್ತು ಪಾಕಿಸ್ತಾನ ತಂಡಗಳ ನಡುವೆ ಪ್ರದರ್ಶನ ಪಯ್ಪೋಟಿಯೊಂದು ನಡೆದಿತ್ತು. 'ಇಂಡಿಯಾ ಕ್ರಿಕೆಟ್ ಕ್ಲಬ್' 50 ವರುಶಗಳನ್ನು ಪೂರೈಸಿದ್ದ ನಲಿವಿಗೆ ಈ ಪಯ್ಪೋಟಿಯನ್ನು ನಡೆಸಲಾಗಿತ್ತು. ಆ ಪಯ್ಪೋಟಿಯಲ್ಲಿ **ಸಚಿನ್**ಪಾಕಿಸ್ತಾನದ ಪರ ಬದಲಿ ಆಟಗಾರನಾಗಿ ಬಯಲ್ಕಾಯುಗೆ (Fielding) ನಡೆಸಿದ್ದರು.

**4) ಎರಡು ನಾಡುಗಳ ಪರ ಪೋಟಿಗಿಳಿದವರೂ ಇದ್ದಾರೆ**

**ಡಿರ್ಕ್ ನ್ಯಾನಸ್**, ಹೆಸರಾಂತ ಎಸೆತಗಾರ. ಈತ ತನ್ನ ದಾಂಡಾಟವನ್ನು ಶುರುವಿಟ್ಟಿದ್ದು ನೆದರ್ ಲ್ಯಾಂಡ್ ತಂಡದ ಪರ. ಬಳಿಕ ಇವರು ನೆದರ್ ಲ್ಯಾಂಡ್ ತಂಡವನ್ನು ತೊರೆದು ಆಸ್ಟ್ರೇಲಿಯಾದ ಪರ ಪಯ್ಪೋಟಿಗಿಳಿದಿದ್ದರು. ಇಂಡಿಯಾದ ಹಳೆಯ ಆಟಗಾರ **ಇಪ್ತಿಕರ್ ಆಲಿ ಕಾನ್ ಪಟವ್ಡಿ**. ಇವರು ಮೊದಲು ಇಂಡಿಯಾದ ಪರ ಆಡಿ ಬಳಿಕ ಇಂಗ್ಲೆಂಡ್ ತಂಡವನ್ನು ಕೂಡಿಕೊಂಡಿದ್ದರು. ಇನ್ನೊಂದು ಸಂಗತಿ ಎಂದರೆ ಇವರು ಬಾಲಿವುಡ್ ಹೆಸರಾಂತ ನಟ **ಸಯ್ಪ್ ಆಲಿ ಕಾನ್** ಅವರ ಅಜ್ಜ.

**5) ಇಂಡಿಯಾದ ದಾಂಡುಗಾರನಿಗೆ ಆಟದ ನಡುವೆ ಸಿಕ್ಕಿತ್ತೊಂದು ಮುತ್ತು**

1960ರಲ್ಲಿ ಆಸ್ಟ್ರೇಲಿಯಾದ ಮೆಲ್ಬೋರ್ನ್ ಅಂಗಳದಲ್ಲಿ ಒಂದು ಪಯ್ಪೋಟಿಯೊಂದು ನಡೆದಿತ್ತು. ಆ ಹೊತ್ತಿನಲ್ಲಿ ಇಂಡಿಯಾದ ಪರ ದಾಂಡುಗಾರಿಕೆ ನಡೆಸುತ್ತಿದ್ದ **ಅಬ್ಬಾಸ್ ಆಲಿ ಬೇಗ್**, ಅಯ್ವತ್ತು ಓಟಗಳನ್ನು ಗಳಿಸಿ ಮುನ್ನುಗ್ಗುತ್ತಿದ್ದರು. ಅಶ್ಚರಲ್ಲಿ ಅಬ್ಬಾಸ್ ರಿಗೆ ಎದುರ್ಗೊಳ್ಳಲು (Greet) ಬಂದ ಮುದ್ದಾದ ಯುವತಿಯೊಬ್ಬಳು, ಎಲ್ಲರೆದುರು ನಡು ಅಂಗಳದಲ್ಲೇ ಅಬ್ಬಾಸ್ ಅವರ ಕೆನ್ನೆಗೆ ಮುತ್ತಿಕ್ಕಿದ್ದಳು. ಇಂತಹ ಬೇರೆ ಬೇರೆ ಬಗೆಯ ಪಯ್ಪೋಟಿಯಲ್ಲಿ ಬಹಳಶ್ಟು ಬಾರಿ ನಡೆದಿದ್ದರೂ ದಾಂಡಾಟಕ್ಕೆ ಹೊಸದಾಗಿತ್ತು.

**6) ದಾಂಡು(Bat) ಇಲ್ಲದೆ ಒದ್ದಾಡಿದ್ದ ಅಪ್ರೀದಿ**



ಪಾಕಿಸ್ತಾನದ ಹೆಸರಾಂತ ಆಟಗಾರ **ಶಾಹೀದ್ ಅಪ್ರೀದಿ** 1996ರಲ್ಲಿ ದಾಂಡುಗಾರಿಕೆ ನಡೆಸಲು ಸರಿಯಾದ ದಾಂಡಿಲ್ಲದೆ ಒದ್ದಾಡಿದ್ದರಂತೆ. ಆಗ ಅವರಿಗೆ ದಾಂಡು ನೀಡಿದವರು ಪಾಕ್ ನ ಇನ್ನೊಬ್ಬ ಆಟಗಾರ **ವಕಾರ್ ಯೂನಿಸ್**. ಅಶ್ಚಕ್ಕೂ ಆ ದಾಂಡು ಯಾರದ್ದು ಗೊತ್ತ? ಅದು ಸಚಿನ್ ತೆಂಡೂಲ್ಕರ್ ವಕಾರ್ ಗೆ ನೀಡಿದ್ದು. ಆ ದಾಂಡಿನಲ್ಲೇ ಅಪ್ರೀದಿ ಬಿರುಸಿನ ನೂರು ಓಟ ಗಳಿಸಿ ದಾಕಲೆ ಬರೆದದ್ದು.

**7) ಟೆಸ್ಟ್ ನಲ್ಲಿ ಸಚಿನ್ ಗಿಂತ ಅವರ ಗೆಳೆಯ ಕಾಂಬ್ಳಿಯೇ ಸಕ್ಕತ್ ಅಂತೆ**

ಸಚಿನ್ ಅವರ ಎಳವೆಯ ಗೆಳೆಯ **ವಿನೋದ್ ಕಾಂಬ್ಳಿ** ಅವರು ಆಡಿದ್ದು ಬರೇ ಹದಿನೇಳು ಟೆಸ್ಟ್ ಪಂದ್ಯಗಳನ್ನು ಮಾತ್ರ. ಆದರೆ ಅವರ ಸರಾಸರಿ ಎಷ್ಟು ಗೊತ್ತ? ನೂರಕ್ಕೆ 54.20 ಅಂತೆ. ಅದೇ ಸಚಿನ್ ಬರೋಬ್ಬರಿ 200 ಟೆಸ್ಟ್ ಪಯ್ಪೋಟಿಯಲ್ಲಿ ಆಡಿ ಗಳಿಸಿದ ಸರಾಸರಿ ನೂರಕ್ಕೆ 53.78 ಅಂತೆ.

**8) ಗೆದ್ದೋರು ಇದ್ದಾರೆ, ಸೋತೋರು ಇದ್ದಾರೆ**

ದಾಂಡಾಟದಲ್ಲಿ ಅರವತ್ತು ಎಸೆತಗಟ್ಟುಗಳು, ಅಯ್ವತ್ತು ಎಸೆತಗಟ್ಟುಗಳು ಮತ್ತು ಇಪ್ಪತ್ತು ಎಸೆತಗಟ್ಟುಗಳು ಸೇರಿದಂತೆ ಈವರೆಗೆ ಮೂರು ಮಾದರಿಯ ಪಯ್ಪೋಟಿಗಳನ್ನು ಅಯ್.ಸಿ.ಸಿ ತನ್ನ ಮುಂದಾಳತ್ವದಲ್ಲಿ ನಡೆಸಿಕೊಟ್ಟಿದೆ. ಈ ಮೂರೂ ಮಾದರಿಯ ಕೊನೆಯ ಹಂತದ ಪಯ್ಪೋಟಿಯಲ್ಲಿ ಗೆದ್ದ ಒಂದೇ ಒಂದು ತಂಡವೆಂದರೆ ಇಂಡಿಯಾ.

* 1983 – 60 ಎಸೆತಗಟ್ಟುಗಳು (ವಿಶ್ವಕಪ್)
* 2007 – 20 ಎಸೆತಗಟ್ಟುಗಳು (ವಿಶ್ವಕಪ್)
* 2011 – 50 ಎಸೆತಗಟ್ಟುಗಳು (ವಿಶ್ವಕಪ್)

ಹಾಗೆಯೇ ಈ ಮೂರು ಮಾದರಿಯ ಕೊನೆಯ ಹಂತದ ಪಯ್ಪೋಟಿಯಲ್ಲಿ ಸೋಲು ಕಂಡ ಒಂದೇ ಒಂದು ತಂಡವೆಂದರೆ ಇಂಗ್ಲೆಂಡ್.

* 1979 – 60 ಎಸೆತಗಟ್ಟುಗಳು (ವಿಶ್ವಕಪ್)
* 1992 – 50 ಎಸೆತಗಟ್ಟುಗಳು (ವಿಶ್ವಕಪ್)
* 2013 – 20 ಎಸೆತಗಟ್ಟುಗಳು(ಚಾಂಪಿಯನ್ಸ್ ಟ್ರೋಪಿ)

**9) ಶ್ರೀಲಂಕನ್ನರು ಆಸ್ಟ್ರೇಲಿಯಾದೆದುರು ಗೆದ್ದಿದ್ದು ಕೇವಲ ಒಂದು ಬಾರಿ**

ಇದು ಹೇಗೆ ಅಂತೀರಾ? ಇದು ನಿಜ ಆದರೆ ಟೆಸ್ಟ್ ಪಯ್ಪೋಟಿಯಲ್ಲಿ ಮಾತ್ರ. ಶ್ರೀಲಂಕ ಮತ್ತು ಆಸ್ಟ್ರೇಲಿಯಾ ತಂಡಗಳ ನಡುವೆ ಈ ವರೆಗೆ ಬಹಳಶ್ಟು ಟೆಸ್ಟ್ ಪಯ್ಪೋಟಿಗಳು ನಡೆದಿವೆ. ವಿಶೇಶವೆಂದರೆ, ಆಸ್ಟ್ರೇಲಿಯನ್ನರು ಶ್ರೀಲಂಕಾಗೆ ಬಂದು ಪಯ್ಪೋಟಿ ನಡೆಸಿದ್ದಕ್ಕಿಂತ ಶ್ರೀಲಂಕಾ ತಂಡ ಆಸ್ಟ್ರೇಲಿಯಾದಲ್ಲಿ ಆಡಿದ್ದೇ ಹೆಚ್ಚು. ತನ್ನ ತವರು ನೆಲದ ನೆರವು ಪಡೆದ ಆಸ್ಟ್ರೇಲಿಯಾ ಲಂಕನ್ನರಿಗೆ ಮಣಿಯಲೇ ಇಲ್ಲ. ಹಾಗೆಯೇ ಶ್ರೀಲಂಕಾದಲ್ಲಿ ಲಂಕನ್ನರು ತನ್ನ ತವರು ನೆಲದ ನೆರವನ್ನು ಸರಿಯಾಗಿ ಎತ್ತುವಲ್ಲಿ ಎಡವಿದ್ದರು. ಹಾಗಾಗಿಯೇ ಈ ವರೆಗೆ ಒಂದೇ ಒಂದು ಟೆಸ್ಟ್ ಪಯ್ಪೋಟಿಯನ್ನು ಲಂಕಾ ಗೆದ್ದಿದ್ದು. ಅದೂ ಕೂಡ ಶ್ರೀಲಂಕಾದಲ್ಲೇ ನಡೆದದ್ದು.

**10) ಸಚಿನ್ + ಜಹೀರ್ = ಕಾಲಿಸ್, ಈ ಲೆಕ್ಕ ಗೊತ್ತಾ?**




ಸಚಿನ್ ಮತ್ತು **ಜಹೀರ್** ಸೇರಿದರೆ ಒಬ್ಬ **ಕಾಲಿಸ್** ಅಂತೆ. ಹೇಗೆ ಅಂತಿರಾ, ಈ ಲೆಕ್ಕ ನೋಡಿ.

ಸಚಿನ್ 15183 ಓಟಗಳು ಮತ್ತು ಸರಾಸರಿ 56.02

ಕಾಲಿಸ್ 12005 ಓಟಗಳು ಮತ್ತು ಸರಾಸರಿ 56.90

ಜಹೀರ್ 273 ವಿಕೆಟ್ ಗಳು ಮತ್ತು ಸರಾಸರಿ 31.78

ಕಾಲಿಸ್ 271 ವಿಕೆಟ್ ಗಳು ಮತ್ತು ಸರಾಸರಿ 32.33

**11) ಕೊನೆಗೆ ಆಟ ನಿಲ್ಲಿಸಿದವರು ಸಚಿನ್**

1989ರಲ್ಲಿ ಸಚಿನ್ ಜೊತೆಗೆ ಸುಮಾರು 23 ಆಟಗಾರರು ಬೇರೆ ಬೇರೆ ತಂಡಗಳಿಗೆ ನಾಡು ನಾಡುಗಳ ಪಯ್ಪೋಟಿಗೆ ಕಾಲಿಟ್ಟಿದ್ದರು. ಆದರೆ ಇವರಲ್ಲಿ ಸಚಿನ್ ಅವರಶ್ಟು ಕಾಲ ದಾಂಡಾಟವಾಡಿದವರು ಯಾರೂ ಇಲ್ಲ. ಸಚಿನ್ ಗಿಂತ ಮೊದಲು ಕೊನೆಯವರಾಗಿ ದಾಂಡಾಟದಿಂದ ಹೊರಬಂದವರು 2004ರಲ್ಲಿ ನ್ಯೂಜಿಲ್ಯಾಂಡ್ ನ **ಕ್ರಿಸ್ ಕೇರ್ನ್ಸ್**. ಅಂದರೆ ಆ ಬಳಿಕ ಸತತ ಹತ್ತು ವರುಶಗಳ ಕಾಲ ಸಚಿನ್ ದಾಂಡಾಟವಾಡಿದ್ದರು.

**12) ಹೆಚ್ಚು ಓಟ ಗಳಿಸಿದ್ದು ಸಚಿನ್ ಅಲ್ಲ, ಹೆಚ್ಚು ಹುತ್ತರಿ ಗಳಿಸಿದ್ದು ಮುರಳಿದರನ್ ಅಲ್ಲ**

ಸಚಿನ್ ಅವರನ್ನು ದಾಂಡಾಟದ ದೇವರೆಂದು ಕರೆಯುವುದು ನಿಮಗೆ ಗೊತ್ತೇ ಇದೆ. ಕಾರಣ ಅವರು ದಾಂಡಾಟದ ಎಲ್ಲಾ ಬಗೆಗಳಲ್ಲೂ ಆಡಿದ ರೀತಿ. ಅದರಲ್ಲೂ ಅವರು ಗಳಿಸಿದ ಓಟಗಳು ಜಗತ್ತು ನಿಬ್ಬೆರಗಾಗಿ ನೋಡುವಂತದ್ದು. ಹಾಗೆಯೇ ಶ್ರೀಲಂಕಾದ **ಮುರಳೀದರನ್** ಗಳಿಸಿದಶ್ಟು ಹುತ್ತರಿ ಇನ್ಯಾರು ಗಳಿಸಿಲ್ಲ ಎಂಬುವುದು ನಮಗೆ ಗೊತ್ತಿರುವುದು. ಆದರೆ ಇಂಗ್ಲೆಂಡ್ ನ **ವಿಲ್ಪರ್ಡ್ ರೋಡ್ಸ್** ಎಂಬ ಆಟಗಾರ 39,969 ಓಟಗಳನ್ನು ದಾಂಡುವಿನ ಮೂಲಕ ಗಳಿಸಿದರೆ, 4204 ಹುತ್ತರಿಯನ್ನು ಎಸೆತಗಾರಿಕೆಯ ಮೂಲಕ ಗಳಿಸಿದ್ದಾರೆ. ಆದರೆ ವಿಲ್ಪರ್ಡ್ ಇದನೆಲ್ಲಾ ಮಾಡಿದ್ದು ನಾಡೊಳಗಣ ಪಯ್ಪೋಟಿಯಲ್ಲಿ. ಇಲ್ಲೊಂದು ವಿಶೇಶವೆಂದರೆ ವಿಲ್ಪರ್ಡ್ ತನ್ನ 52ರ ವಯಸ್ಸಿನ ವರೆಗೂ ದಾಂಡಾಟವಾಡಿದ್ದರು.

**13) ವೀರೂ-ಗಿಲ್ಲಿ ಕಿಂಗ್ ಪೇರ್ ಅನ್ನೋದು ಯಾರಿಗಾದ್ರು ಗೊತ್ತಾ?**



ಒಂದೆಡೆ ಇಂಡಿಯಾದ ದಾಂಡಾಟದ ದಿಗ್ಗಜ **ವಿರೇಂದರ್ ಸೆಹ್ವಾಗ್**, ಇನ್ನೊಂದೆಡೆ ಆಸ್ಟ್ರೇಲಿಯಾದ ಬಿರುಸಿನ ದಾಂಡುಗಾರ **ಆಡಂ ಗಿಲ್ ಕ್ರಿಸ್ಟ್**. ಅರೇ, ಬೇರೆ ಬೇರೆ ತಂಡಗಳಿಗೆ ಆಡುವ ಇಬ್ಬರು ಕಿಂಗ್ ಪೇರ್ ಹೇಗಾಗ್ತಾರೆ ಅಂತನಾ? ಒಂದು ಟೆಸ್ಟ್ ಪಯ್ಪೋಟಿಯ ಎರಡು ಇನ್ನಿಂಗ್ಸ್ ನಲ್ಲಿ ಸೊನ್ನೆಗೆ ಹೊರ ನಡೆಯುವ ಎದುರಾಳಿ ತಂಡದ ಇಬ್ಬರು ಆಟಗಾರರನ್ನು ಪೇರ್ (ಜೋಡಿ) ಎನ್ನುವರು. ಆದರೆ ಎರಡೂ ಇನ್ನಿಂಗ್ಸ್ ನ ಮೊದಲ ಎಸೆತದಲ್ಲಿ ಹೊರ ನಡೆಯುವ ಎದುರಾಳಿ ತಂಡದ ಆರಂಬಿಕರನ್ನು ಕಿಂಗ್ ಪೇರ್ (ದೊರೆ ಜೋಡಿ) ಎನ್ನುವರು. ಈ ರೀತಿ ಒಮ್ಮೆ ಇಂಡಿಯಾ ಮತ್ತು ಆಸ್ಟ್ರೇಲಿಯಾ ನಡುವಣ ಪಯ್ಪೋಟಿಯಲ್ಲಿ ನಡೆದಿತ್ತು. ಇಂಡಿಯಾದ ಸೆಹ್ವಾಗ್ ಮತ್ತು ಆಸ್ಟ್ರೇಲಿಯಾದ ಗಿಲ್ ಕ್ರಿಸ್ಟ್ ಎರಡೂ ಇನ್ನಿಂಗ್ಸ್ ನ ಮೊದಲ ಎಸೆತದಲ್ಲೇ ಬಲಿಯಾಗಿದ್ದರು.

**14) ಈಗ ಮಾಡುತ್ತಿರುವ 'ಓವರ್ ಆರ್ಮ್' ಎಸೆತಗಾರಿಕೆ ದಾಂಡಾಟದ ಕಾನೂನಿಗೆ ವಿರುದ್ದವಂತೆ**

ದಾಂಡಾಟದ ಹಳಮೆಯನ್ನೊಮ್ಮೆ ನೋಡಿದಾಗ ನಮಗರಿವಾಗುವುದು ಮೊದಲು ಅಂಡರ್ ಆರ್ಮ್ ಎಸೆತಗಾರಿಕೆ ನಡೆಸುತ್ತಿದ್ದರೆಂಬುದು. ಅಂದರೆ ಎಸೆತಗಾರಿಕೆಯ ಮೂಲ ಅಂಡರ್ ಆರ್ಮ್ ಎಂಬುವುದು. ಮುಂದೆ ಜಾಗತಿಕ ದಾಂಡಾಟದ ಹೊತ್ತಿಗೆ **ಜಾನ್ ವೈಲ್ಸ್** ಎಂಬಾತ ಓವರ್ ಆರ್ಮ್ ಎಸೆತಗಾರಿಕೆಯನ್ನು ಬಳಕೆಗೆ ತಂದ. ಈ ಬಗೆಯ ಎಸೆತಗಾರಿಕೆಯನ್ನು ಆತ ತನ್ನ ತಂಗಿಯಿಂದ ಕಲಿತಿದ್ದ. ಅಲ್ಲಿಂದ ಇಂದಿನ ವರೆಗೂ ಓವರ್ ಆರ್ಮ್ ಎಸೆತಗಾರಿಕೆ ಬಳಕೆಯಲ್ಲಿದೆ.

*(**ಚಿತ್ರ ಸೆಲೆ:** listden.com, espncricinfo.com, dawn.com, cricinfo, telegraph.co.uk)*
*(**ಮಾಹಿತಿ ಸೆಲೆ**: brandsynario.com)*

# ಹೊನಲು ಬೆಳಕಿನ ಟೆಸ್ಟ್ ಕ್ರಿಕೆಟ್



ಇಂದಿನ ದಾಂಡಾಟ (Cricket)ವು ದಿನ ದಿನಕ್ಕೂ ಬದಲಾವಣೆಯ ದಾರಿಯಲ್ಲಿಯೇ ನಡೆದು ಬಂದಿದೆ. ನೋಡುಗರನ್ನು ಸೆಳೆಯುವಂತಹ ಮಾರ್ಪಾಡುಗಳನ್ನು ಅಳವಡಿಸಿಕೊಂಡು ಮುನ್ನುಗ್ಗುತ್ತಿರುವ ದಾಂಡಾಟವು, ಹೊಸತನವನ್ನೇ ಬಂಡವಾಳಗಿಸಿಕೊಂಡಿದೆ ಎಂದರೆ ತಪ್ಪಿಲ್ಲ. ಇಂತಹ ಸಾಲಿಗೆ ಈ ಬಾರಿ ಸೇರಿಕೊಳ್ಳುತ್ತಿರುವುದು ಹೊನಲು ಬೆಳಕಿನ ಟೆಸ್ಟ್ ಪಯ್ಪೋಟಿ. **ಆಸ್ಟ್ರೇಲಿಯಾ** ಮತ್ತು **ನ್ಯೂಜಿಲ್ಯಾಂಡ್** ನಡುವೆ ನವೆಂಬರ್ ತಿಂಗಳ ಸುಮಾರಿಗೆ ನಡೆಯಲಿರುವ ಈ ಪಯ್ಪೋಟಿ ಇಂತಹ ಒಂದು ಹೊಸತನಕ್ಕೆ ಮುನ್ನುಡಿಯಾಗಿ ನಿಲ್ಲಲಿದೆ.

ಅಶ್ಟಕ್ಕೂ ದಾಂಡಾಟವು ಮೊದಲ್ಗೊಂಡಿದ್ದು ಟೆಸ್ಟ್ ಪಯ್ಪೋಟಿಯ ಮೂಲಕವೇ. ಆದರೆ ದಿನಗಳು ಉರುಳಿದಂತೆ ಬದಲಾವಣೆಯ ಗಾಳಿಗೆ ಒಂದು ನಾಳಿನ ಪಯ್ಪೋಟಿ, ಇಪ್ಪತ್ತು ಎಸೆತಗಟ್ಟುಗಳ (20-20) ಪಯ್ಪೋಟಿಗಳು ಹುಟ್ಟಿಕೊಂಡವು. ಆದರೆ ಹೆಚ್ಚಿನ ರೀತಿ ರಿವಾಜುಗಳ ಬದಲಾವಣೆಗೆ ಟೆಸ್ಟ್ ಪಯ್ಪೋಟಿಗಳು ಒಳಗಾಗಲಿಲ್ಲ. ಬದಲಾಗಿ ದಾಂಡಾಟದ ಇತರ ಮಾದರಿಗಳೇ ಹೊಸತನದ ಮಾರ್ಪಾಡುಗಳನ್ನು ಕಂಡುಕೊಂಡವು. ಆದರೆ ಈ ಬಾರಿ ಅಂತಹ ಒಂದು ಅವಕಾಶ ಟೆಸ್ಟ್ ಪಯ್ಪೋಟಿಯ ಪಾಲಾಗಿದೆ. ದಾಂಡಾಟದ ಹಳಮೆಯಲ್ಲಿಯೇ ಮೊದಲ ಬಾರಿಗೆ ಹೊನಲು ಬೆಳಕಿನ ಟೆಸ್ಟ್ ಪಯ್ಪೋಟಿಯೊಂದು ನಡೆಯಲಿದೆ.

ದಾಂಡಾಟಕ್ಕೂ ಮುಂಚೆ ಹೊನಲು ಬೆಳಕಿನ ಕಾಲ್ಚೆಂಡಿನಾಟವನ್ನು ಆಡಲಾಗುತ್ತಿತ್ತು. ಅಲ್ಲದೇ ಇದರತ್ತ ನೋಡುಗರೂ ಹೆಚ್ಚಾಗಿ ಬರುತ್ತಿದ್ದರು. ಇದನ್ನೇ ಗಮನದಲ್ಲಿಟ್ಟುಕೊಂಡು ದಾಂಡಾಟದಲ್ಲೂ ಇದನ್ನು ಜಾರಿಗೆ ತರಲು ಹಮ್ಮುಗೆಗಳು ನಡೆಯುತ್ತಿದ್ದವು. ಈ ನಿಟ್ಟಿನಲ್ಲಿ ಮೊದಲ ಬಾರಿಗೆ ಹೊನಲು ಬೆಳಕಿನ ದಾಂಡಾಟವನ್ನು **ಆಗಸ್ಟ್ 11, 1952**ರಲ್ಲಿ ಆಸ್ಟ್ರೇಲಿಯಾದ ನಾಡೊಳಗಣ ದಾಂಡಾಟದ ಕೂಟದಲ್ಲಿ ಆಡಿಸಲಾಯಿತು. ಬಿಬಿಸಿಯಲ್ಲಿ ನೇರಪ್ರಸಾರಗೊಂಡ ಈ ಪಯ್ಪೋಟಿಯನ್ನು ಒಂದು ಮಿಲಿಯನ್ ಗೂ ಹೆಚ್ಚು ಮಂದಿ ಗೆಂಟುಕಾಣ್ಕೆಯಲ್ಲಿ ನೋಡಿದ್ದರು. ಹೆಚ್ಚಿನ ಕುತೂಹಲದಿಂದ ತಡರಾತ್ರಿಯ ವರೆಗೆ ಸಾಗಿದ್ದ ಈ ಪಯ್ಪೋಟಿಯನ್ನು ಕೊನೆಯ ಹಂತದವರೆಗೂ ಮಂದಿ ನೋಡಿದ್ದರು.

ಆ ಬಳಿಕ ಅಯ್.ಸಿ.ಸಿಯು ಹೆಚ್ಚು ಹೆಚ್ಚು ಹೊನಲು ಬೆಳಕಿನ ಪಯ್ಪೋಟಿಯನ್ನು ಏರ‍್ಪಡಿಸಲು ಒತ್ತು ನೀಡಿತು. ಹಾಗೆಯೇ ಜಗತ್ತಿನ ಹೆಸರಾಂತ ದಾಂಡಾಟದ ಪೋಟಿಗಾರರನ್ನು ಕೂಡಿಸಿಕೊಂಡು **1977ರಲ್ಲಿ ಆಸ್ಟ್ರೇಲಿಯಾದ ಮೆಲ್ಬರ‍್ನ್** ಅಂಗಣದಲ್ಲಿ ಆಸ್ಟ್ರೇಲಿಯಾ ಮತ್ತು ವೆಸ್ಟ್ ಇಂಡೀಸ್ ನಾಡುಗಳ ನಡುವೆ ಕೂಟವೊಂದನ್ನು ನಡೆಸಲಾಯಿತು. ಆ ಮೂಲಕ ಮೊದಲ ಬಾರಿಗೆ ಹೊನಲು ಬೆಳಕಿನ ದಾಂಡಾಟವನ್ನು ಆಡಿಸಲಾಯಿತು. ಆದರೆ ಕೇವಲ 2000 ಮಂದಿ ನೋಡುಗರನ್ನು ಸೆಳೆದ ಈ ಪಯ್ಪೋಟಿ ಅಶ್ಟೊಂದು ಹೆಸರುವಾಸಿಯಾಗಲಿಲ್ಲ. ಇದಾದ ಒಂದು ವರುಶದ ಬಳಿಕ ಮತ್ತೆ ಆಸ್ಟ್ರೇಲಿಯಾದ ಸಿಡ್ನಿ ಅಂಗಣದಲ್ಲಿ ಆಸ್ಟ್ರೇಲಿಯಾ ಮತ್ತು ವೆಸ್ಟ್ ಇಂಡೀಸ್ ನಾಡುಗಳ ನಡುವೆ ಹೊನಲು ಬೆಳಕಿನ ಪಯ್ಪೋಟಿ ಏರ‍್ಪಟ್ಟಿತ್ತು. ಈ ಪಯ್ಪೋಟಿಯು ಸುಮಾರು **44000ಕ್ಕೂ ಹೆಚ್ಚು ಮಂದಿ**ಯನ್ನು ಸೆಳೆಯಿತು. ಅಲ್ಲದೇ ಆ ಹೊತ್ತಿಗೆ ಬಹಳಶ್ಟು ಹೆಸರು ಮಾಡಿದ್ದ ಹೊನಲು ಬೆಳಕಿನ ಕಾಲ್ಚೆಂಡಿನಾಟ ದಾಂಡಾಟದ ಹೊಸ ಬದಲಾವಣೆಯನ್ನು ಬೆಂಬಲಿಸಿತು ಕೂಡ. ಇಲ್ಲಿಂದ ಮುಂದೆ ನಾಡು ನಾಡುಗಳ ನಡುವಣ ಹೊನಲು ಬೆಳಕಿನ ದಾಂಡಾಟದ ಪಯ್ಪೋಟಿಗಳು ನಡೆಯಲಾರಂಬಿಸಿದವು. ಅಲ್ಲದೇ ಇಂದಿನ ದಿನಗಳಲ್ಲಿ ನಡೆಯುವ ಒಂದು ನಾಳಾಟಗಳು ಹೆಚ್ಚಾಗಿ ಹೊನಲು ಬೆಳಕಿನದ್ದೇ ಆಗಿರುತ್ತದೆ.

ಆದರೆ ಇವೆಲ್ಲಾ ಪಯ್ಪೋಟಿಗಳು ಒಂದು ನಾಳಾಟವಾಗಿದ್ದವೇ ಹೊರತು ಅಯ್.ಸಿ.ಸಿ ಮುಂದಾಳ್ತನದಲ್ಲಿ ಯಾವುದೇ ಹೊನಲು ಬೆಳಕಿನ ಟೆಸ್ಟ್ ಪಯ್ಪೋಟಿಗಳು ನಡೆಯಲಿಲ್ಲ. ಕಡಿಮೆ ಎಂದರೂ ಐದು ದಿನಗಳ ವರೆಗೆ ನಡೆಯುವ ಟೆಸ್ಟ್ ಪಯ್ಪೋಟಿಯನ್ನು ಇರುಳಿನ ಮಿಂಚಿನ ಬೆಳಕಿನಲ್ಲಿ ನಡೆಸುವುದು ಅಶ್ಟು ಸುಲಬದ ಮಾತಲ್ಲ. ದಿನವೊಂದಕ್ಕೆ ಸುಮಾರು ಎಂಟು ಗಂಟೆಗಳ ಹೊತ್ತು ನಡೆಯುವ ಟೆಸ್ಟ್ ಪಯ್ಪೋಟಿಯಲ್ಲಿ ಇತ್ತಂಡಗಳು ಇರುಳಲ್ಲಿ ಆಡುವುದು ಕಶ್ಟದ ಮಾತು. ಆದರೆ ಈಗ ಅಂತಹ ಒಂದು ಸವಾಲನ್ನು ಎದುರಿಸುವ ಹೊತ್ತು ಬಂದಿದೆ.

ನವೆಂಬರ್ ತಿಂಗಳಿನಲ್ಲಿ ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಎರಡು ಪಯ್ಪೋಟಿಗಳ ಕೂಟವೊಂದರಲ್ಲಿ ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ ತಂಡಗಳು ಕಾದಾಡಲಿವೆ. ಇದಕ್ಕೆ ಇತ್ತಂಡಗಳ ಮಂಡಳಿಗಳು ಒಪ್ಪಿಗೆ ನೀಡಿದ್ದು, ಆಸ್ಟ್ರೇಲಿಯಾವು ಈ ಕೂಟದ ಮುಂದಾಳ್ತನವನ್ನು ವಹಿಸಲಿದೆ. ಆದರೆ ಮೆಲ್ಬರ‍್ನ್ ಅತವಾ ಅಡಿಲೇಡ್ ಅಂಗಣದಲ್ಲಿ ಈ ಪಯ್ಪೋಟಿಯನ್ನು ನಡೆಸುವ ಹಮ್ಮುಗೆ ಇದ್ದು, ಇನ್ನಶ್ಟೇ ಈ ಬಗ್ಗೆ ಆಸ್ಟ್ರೇಲಿಯಾ ದಾಂಡಾಟದ ಮಂಡಳಿಯು ನಿರ‍್ದಾರ ಕಯ್ಗೊಳ್ಳಬೇಕಿದೆ. ಆದರೆ **ಅಡಿಲೇಡ್** ಅಂಗಳದಲ್ಲಿ ಈ ಪಯ್ಪೋಟಿಯು ನಡೆಯಲಿದೆ ಎಂಬ ಸುದ್ದಿಯಿದೆ. ಹೊನಲು ಬೆಳಕಿನ ಟೆಸ್ಟ್ ಪಯ್ಪೋಟಿಯನ್ನು ನಡೆಸುವತ್ತ ಅಯ್.ಸಿ.ಸಿ ಈವರೆಗೆ ಅಂತಹ ಗಟ್ಟಿ ನಿರ‍್ದಾರವನ್ನು ತೆಗೆದುಕೊಂಡಿರಲಿಲ್ಲ. ಆದರೆ ಇದರತ್ತ ಆಸ್ಟ್ರೇಲಿಯಾ ಮತ್ತು ನ್ಯೂಜಿಲ್ಯಾಂಡ್ ಮಂಡಳಿಯ ಕೆಲಸವನ್ನು ಗಮನದಲ್ಲಿಟ್ಟುಕೊಂಡು ಒಪ್ಪಿಗೆ ಸೂಚಿಸಿತ್ತು. ಈ ನಿಟ್ಟಿನಲ್ಲಿ ಕಳೆದ ವರುಶ ಜೂನ್ ತಿಂಗಳ ಹೊತ್ತಿಗೆ ಇಂತಹ ಒಂದು ಕೂಟದ ಹಮ್ಮುಗೆಯ ಬಗ್ಗೆ ಯೋಚಿಸಲಾಗಿತ್ತು. ಮೊದಮೊದಲು ನ್ಯೂಜಿಲ್ಯಾಂಡಿನ ಆಟಗಾರರು ಇದಕ್ಕೆ ವಿರೋದವನ್ನು ವ್ಯಕ್ತಪಡಿಸಿದ್ದರು. ಆದರೆ ಹಮ್ಮುಗೆಯೆಡೆಗೆ ಆಸ್ಟ್ರೇಲಿಯನ್ನರ ಎಡೆಬಿಡದ ಒತ್ತಾಯಕ್ಕೆ ಮಣಿದು ಒಪ್ಪಿಗೆ ಸೂಚಿಸಿದ್ದರು.

ನಮಗೆಲ್ಲಾ ತಿಳಿದಂತೆ ಇರುಳಿನಲ್ಲಿ ದಾಂಡುಗಾರ ಚೆಂಡನ್ನು ಎದುರಿಸುವುದು ನಿಜಕ್ಕೂ ಸವಾಲಿನ ಕೆಲಸ. ಒಂದು ನಾಳಾಟದಲ್ಲಿ ನಾಡಿನಾದ್ಯಂತ ತಂಡಗಳ ಉಡುಪು ಬೇರೆ ಬೇರೆ ಬಣ್ಣದ್ದಾಗಿರುತ್ತದೆ. ಹಾಗಾಗಿ ಬಿಳಿ ಬಣ್ಣದ ಹೊಳೆಯುವ ಚೆಂಡನ್ನು ಬಳಸುವುದು ಸಾಮಾನ್ಯ. ಅದೇ ಟೆಸ್ಟ್ ಪಯ್ಪೋಟಿಗಳ ವಿಚಾರಕ್ಕೆ ಬಂದಾಗ ಕೆಂಪು ಬಣ್ಣದ ಚೆಂಡನ್ನು ಮಾತ್ರ ಬಳಸಲಾಗುತ್ತದೆ. ಆದರೆ ಹೊನಲು ಬೆಳಕಿನ ಟೆಸ್ಟ್ ಪಯ್ಪೋಟಿಗೆಂದೇ ಅಯ್.ಸಿ.ಸಿ ಗುಲಾಬಿ ಬಣ್ಣದ ಹೊಳೆಯುವ ಚೆಂಡನ್ನು ಬಳಸಲು ಮುಂದಾಗಿದೆ. ವಿಶೇಶವೆಂದರೆ ನಾಡು ನಾಡುಗಳ ನಡುವಣ ಗಂಡಸರ ದಾಂಡಾಟದ ಪಯ್ಪೋಟಿಯಲ್ಲಿ ಗುಲಾಬಿ ಚೆಂಡನ್ನು ಬಳಸುತ್ತಿರುವುದು ಇದೇ ಮೊದಲು. ಈ ಹಿಂದೆ ಹೆಂಗಸರ ದಾಂಡಾಟದ ಪಯ್ಪೋಟಿಯಲ್ಲಿಗುಲಾಬಿ ಚೆಂಡನ್ನು ಬಳಸಿದ್ದರು. ಆದರೆ ಚೆಂಡುಗಳು ಬೇಗನೆ ತನ್ನ ಗುಣವನ್ನು ಕಳೆದುಕೊಳ್ಳುತ್ತದೆ ಎಂಬ ಕೂಗುಗಳು ಕೇಳಿಬಂದಿದ್ದವು. ಆದರೆ ಈ

ಬಾರಿ ದಾಂಡಾಟದ ಚೆಂಡಿನ ತಯಾರಿಕೆಯಲ್ಲಿ ತುಸು ಬದಲಾವಣೆಯನ್ನು ತಂದು ಹೊಸ ಮಾದರಿಯ ಗುಲಾಬಿ ಬಣ್ಣದ ಚೆಂಡನ್ನು ಬಳಸಲಾಗುತ್ತಿದೆ. ಒಟ್ಟಿನಲ್ಲಿ ಈ ಪಯ್ಪೋಟಿಯು ಹಲವು ಕಾರಣಕ್ಕೆ ಎಲ್ಲೆಡೆ ಸದ್ದು ಮಾಡುತ್ತಿದ್ದು, ಎಲ್ಲರ ಗಮನ ಈ ಪಯ್ಪೋಟಿಯತ್ತ ಹರಿಯುತ್ತಿದೆ.

*(**ಮಾಹಿತಿ ಸೆಲೆ:** ibnlive)*

*(**ಚಿತ್ರ ಸೆಲೆ:** mysports.today)*


# ಕ್ರಿಕೆಟ್ ಚೆಂಡನ್ನು ತಯಾರಿಸುವ ಬಗೆ



**ದಾಂಡಾಟದ** (Cricket) ಬೇಕುಗಳಲ್ಲಿ ಚೆಂಡು (Ball) ಮುಖ್ಯವಾದದ್ದು. ಏಕೆಂದರೆ ಚೆಂಡು ಮತ್ತು ದಾಂಡು (Bat)ವಿನ ಹೊರತಾಗಿ ದಾಂಡಾಟವು ಪೂರ್ತಿಯಾಗುವುದಿಲ್ಲ. ಸಾಮಾನ್ಯವಾಗಿ ಬಹಳಶ್ಟು ಬಗೆಯ ಚೆಂಡುಗಳನ್ನು ದಾಂಡಾಟದಲ್ಲಿ ಬಳಸಲಾಗುತ್ತದೆ. ನೀರ‍್ಕರಿಯಚ್ಚು (Plastic), ಹಿಗ್ಗುಕ (rubber) ಮತ್ತು **ಬೆಂಡಿನ** (Cork) ಚೆಂಡುಗಳು ಸೇರಿದಂತೆ ಬೇರೆ ಬೇರೆ ಬಗೆಯ ದಾಂಡಾಟದಲ್ಲಿ ಬೇರೆ ಬೇರೆ ಬಗೆಯ ಚೆಂಡುಗಳನ್ನು ಬಳಸುವುದುಂಟು. ಆದರೆ ಅಯ್.ಸಿ.ಸಿ ಮುಂದಾಳ್ತನದಲ್ಲಿ ನಾಡುನಡುವಿನ ದಾಂಡಾಟದ ಕೂಟಗಳು, ಬಿ.ಸಿ.ಸಿ.ಅಯ್ ಮುಂದಾಳ್ತನದಲ್ಲಿ ನಾಡೊಳಗಣ ದಾಂಡಾಟದ ಕೂಟಗಳು ನಡೆಯುವಾಗ ಮಾತ್ರ ಒಂದೇ ಬಗೆಯ ಚೆಂಡುಗಳನ್ನು ಬಳಸುತ್ತಾರೆ. ಹಾಗಾಗಿ ಬೆಂಡಿನ ಚೆಂಡುಗಳನ್ನು ಬಳಸುವುದು ಸಾಮಾನ್ಯ. ಇಂತಹ ಬೆಂಡಿನ ಚೆಂಡುಗಳ ಬಗ್ಗೆ ತಿಳಿದುಕೊಳ್ಳುವ ಚಿಕ್ಕ ಪ್ರಯತ್ನವನ್ನು ಈ ಬರಹದಲ್ಲಿ ಮಾಡಲಾಗಿದೆ.

ನಮಗೆಲ್ಲರಿಗೂ ತಿಳಿದಿರುವಂತೆ ನಾಡುನಡುವಿನ ದಾಂಡಾಟದ ಚೆಂಡುಗಳ ತಯಾರಿಕೆಯಲ್ಲಿ ಬೆಂಡು ಮತ್ತು ಚರ‍್ಮದ ಬಳಕೆಯನ್ನು ಮಾಡಲಾಗುತ್ತದೆ. ಬೆಂಡು ಒಂದು ಹಿಗ್ಗುವ ವಸ್ತುವಾದದ್ದರಿಂದ ಚೆಂಡು **ಪುಟಿ**ಯಲು (Bounce) ಇದು ನೆರವಾಗುತ್ತದೆ. ಚೆಂಡನ್ನು ತಯಾರಿಸುವ ಹೊತ್ತಿನಲ್ಲಿ ಬೆಂಡಿನ ತಿರುಳುಗಳಿಗೆ, ಗಾಯಕ್ಕೆ ಕಟ್ಟುವ ಪಟ್ಟಿಯ ದಾರದಿಂದ ಬಿಗಿಯಾಗಿ ಬಿಗಿದು, ಚರ‍್ಮದ ಹೊದಿಕೆಯಿಂದ ಸುತ್ತಿ ಹೊಲಿಯುತ್ತಾರೆ. ಈ ಹೊತ್ತಿನಲ್ಲಿ ಚೆಂಡು ದುಂಡಾಗಿ ಕಿತ್ತಳೆ ಹಣ್ಣಿನ ರೀತಿ ಆಕಾರ ಪಡೆದುಕೊಳ್ಳುವಂತೆ ನೋಡಿಕೊಳ್ಳಲಾಗುತ್ತದೆ.


**ಚೆಂಡು ಮತ್ತು ಚರ್ಮದ ಹೊದಿಕೆ**




ಎಸೆತಗಾರನು ಚೆಂಡಿನ ಮೇಲೆ ಹಿಡಿತ ಪಡೆಯುವಲ್ಲಿ ಮತ್ತು ಚೆಂಡು ಗಾಳಿಯಲ್ಲಿ **ತೇಲುವಂತೆ (Swing)** ಮಾಡಲು ಚೆಂಡಿನ ನಡುಗೆರೆಯು ಹೆಚ್ಚಿನ ಕೆಲಸ ಮಾಡುತ್ತದೆ. ಹಾಗಾಗಿ ಚೆಂಡಿನ ನಡುಗೆರೆಯನ್ನು ಮಾಡಲು, ಚೆಂಡಿನ ನಡುಬಾಗವನ್ನು ಆರು ಸಾಲುಗಳ ಹೊಲಿಗೆಯಾಗಿ ದಾರದಿಂದ ಹೊಲಿಯಲಾಗುತ್ತದೆ. ಅಂದರೆ ಚೆಂಡಿನ ನಡುಬಾಗದಿಂದ ಬಲಕ್ಕೆ ಮೂರುಗೆರೆ ಮತ್ತು ಎಡಕ್ಕೆ ಮೂರುಗೆರೆಯ ಹೊಲಿಗೆ ಮಾಡುವಂತೆ ನೋಡಿಕೊಳ್ಳಲಾಗುತ್ತದೆ. ಆದರೆ ಚರ್ಮದಿಂದ ತೇಪೆಹಾಕುವ ಚೆಂಡಿನ ನಡುಬಾಗದ ಉಳಿದ ಎರಡು ಕೂಡುಗೆರೆಗಳನ್ನು ಚೆಂಡಿನ ಒಳಬಾಗದಿಂದಲೇ ಹೊಲಿಯಲಾಗುತ್ತದೆ.

ಸಾಮಾನ್ಯವಾಗಿ ಯುವಕರ ದಾಂಡಾಟಕ್ಕೆ ಬಳಸುವ ಚೆಂಡು **155.9** ಗ್ರಾಂ ನಿಂದ **163.00** ಗ್ರಾಂ ನಷ್ಟು ತೂಕವಿರುತ್ತದೆ. ಅಲ್ಲದೇ ಸುತ್ತಳತೆಯಲ್ಲಿ**224 ಮಿ.ಮೀ.** ರಿಂದ **229 ಮಿ.ಮೀ** ನಶ್ಟಿರುತ್ತದೆ. ಆದರೆ ಹೆಂಗಸರ ದಾಂಡಾಟದಲ್ಲಿ ಬಳಸುವ ಚೆಂಡುಗಳ ಗಾತ್ರ ಮತ್ತು ತೂಕ ಯುವಕರ ದಾಂಡಾಟದ ಚೆಂಡಿಗಿಂತ ತುಸು ಕಡಿಮೆಯಿರುತ್ತದೆ.

**ಚೆಂಡಿನ ಒಳ ಬಾಗ**



ದಾಂಡಾಟದ ಶುರುವಿನಿಂದಲೂ ಕೆಂಪು ಬಣ್ಣದ ಚೆಂಡುಗಳನ್ನೇ ಬಳಸುತ್ತಾ ಬರಲಾಗಿತ್ತು. ಇದರ ಹಿಂದೆಯೊಂದು ಅರಿಮೆ ಇದೆ. ಹಿಂದೆ ಆಟಗಾರರು ಬಿಳಿ ಬಣ್ಣದ ಬಟ್ಟೆಯನ್ನು ಹಾಕಿಕೊಂಡು ಆಟವಾಡುತ್ತಿದ್ದರು. ಇದರಿಂದ ಎಸೆತಗಾರನು ಎಸೆತಗಾರಿಕೆ ನಡೆಸುವಾಗ ದಾಂಡುಗಾರನಿಗೆ ಬಿಳಿ ಬಣ್ಣದ ಹಿನ್ನಲೆಯಿಂದ (Background) ಕೆಂಪು ಬಣ್ಣದ ಚೆಂಡನ್ನು ಗುರುತಿಸಿ ಆಡಲು ನೆರವು ನೀಡುತ್ತಿತ್ತು. ಆದರೆ ಇಂದಿನ ದಾಂಡಾಟದಲ್ಲಿ ಸಾಕಶ್ಟು ಬದಲಾವಣೆಗಳಾಗಿ ಬಣ್ಣ ಬಣ್ಣದ ಬಟ್ಟೆಗಳನ್ನು ಹಾಕಿಕೊಂಡು ಆಡುವ ಪದ್ದತಿ ಬಂದಿತು. ಆ ಮೂಲಕ ಒಂದು ನಾಳಾಟದಲ್ಲಿ ಪಾಲ್ಗೊಳ್ಳುತ್ತಿದ್ದ ಎಲ್ಲಾ ನಾಡುಗಳು ತಮ್ಮ ತಂಡಕ್ಕೆ ಬಣ್ಣದ ಬಟ್ಟೆಯನ್ನು ಬಳಸಲು ಶುರುವಿಟ್ಟರು. ಇದು ದಾಂಡುಗಾರನಿಗೆ ಕೆಂಪು ಬಣ್ಣದ ಚೆಂಡನ್ನು ಗುರುತಿಸಲು ಸವಾಲೆನಿಸಿತು.

ಮುಂದೆ ದಾಂಡಾಟದ ಕಾನೂನುಗಳಲ್ಲಿ ತುಸು ಬದಲಾವಣೆಗಳನ್ನು ತರಲು ಅಯ್.ಸಿ.ಸಿ ತೀರ್ಮಾನಿಸಿತು. ಹಾಗಾಗಿ ಯಾವುದೇ ಬಣ್ಣದ ಹಿನ್ನಲೆಯಲ್ಲೂ ಕಾಣಬಲ್ಲ ಬಿಳಿ ಬಣ್ಣದ ಚೆಂಡನ್ನು ಅಯ್.ಸಿ.ಸಿ ದಾಂಡಾಟದ ಪಯ್ಪೋಟಿಯಲ್ಲಿ ಅಳವಡಿಸಿತು. ಆ ಮೂಲಕ ಒಂದು ನಾಳಾಟದಲ್ಲಿ ಬಿಳಿ ಬಣ್ಣದ ಚೆಂಡುಗಳು ಬಳಕೆಗೆ ಬಂದವು. 1979 ನವೆಂಬರ್ 27ರಲ್ಲಿ **ಆಸ್ಟ್ರೇಲಿಯಾದ ಸಿಡ್ನಿ** (SCG) ಅಂಗಣದಲ್ಲಿ ನಡೆದ ವರ್ಲ್ಡ್ ಸೀರಿಸ್ ಕಪ್ ನಲ್ಲಿ ಮೊದಲ ಬಾರಿಗೆ ಬಿಳಿ ಬಣ್ಣದ ಚೆಂಡನ್ನು ಒಂದು ನಾಳಾಟದಲ್ಲಿ ಬಳಸಲಾಯಿತು.

ಆದರೆ ಮುಂದೆ ಬಿಳಿ ಬಣ್ಣದ ಚೆಂಡುಗಳು ಕೂಡ ಸವಾಲಾಗಿ ಕಂಡು ಬಂದವು. ಕಾರಣ ಹೊನಲು ಬೆಳಕಿನ (Day Night) ಪಯ್ಪೋಟಿಯಲ್ಲಿ ಬಿಳಿ ಬಣ್ಣದ ಚೆಂಡುಗಳು ಪೋಟಿ ಸಾಗಿದಂತೆ ಕಂದು ಬಣ್ಣಕ್ಕೆ ತಿರುಗುತ್ತಿದ್ದವು. ಇದು **ನಡುಹಾಸಿನ (Pitch)** ಬಣ್ಣಕ್ಕೆ ಹೆಚ್ಚು ಹೊಂದುವುದರಿಂದ ದಾಂಡುಗಾರನಿಗೆ ಎಸೆತ ಗುರುತಿಸಲು ಮತ್ತೆ ಸವಾಲಾಗುವಂತೆ ಮಾಡಿತು. ಇದು ದಾಂಡಾಟದ ಸರದಿಯೊಂದರಲ್ಲಿ ಎರಡು ಹೊಸ ಚೆಂಡುಗಳ ಬಳಕೆಗೆ ಕಾರಣವಾಯಿತು. ಅಲ್ಲದೇ ಇತ್ತೀಚಿನ ದಾಂಡಾಟದಲ್ಲಿ ಚೆಂಡುಗಳನ್ನು ಬೆಳಕಿನಿಂದ ತುಸು ಹೊಳೆಯುವಂತೆ ತಯಾರಿಸಿ, ಹೊನಲು ಬೆಳಕಿನ ಪಯ್ಪೋಟಿಯಲ್ಲಿ ಬಳಸಲಾಗುತ್ತದೆ.




ಬಿಳಿ ಮತ್ತು ಕೆಂಪು ಬಣ್ಣದ ಚೆಂಡಿನ ಬಳಕೆ ಹೊರತುಪಡಿಸಿ ಅಯ್.ಸಿ.ಸಿ ಒಮ್ಮೆ ಗುಲಾಬಿ ಬಣ್ಣದ ಚೆಂಡನ್ನು ಬಳಸಿ ಅರಕೆ (experiment) ಮಾಡಲಾಯಿತು. 2009ರ ಜುಲಯ್ ನಲ್ಲಿ ಇಂಗ್ಲೆಂಡ್ ಹೆಂಗಳೆಯರ ತಂಡ ಮತ್ತು ಆಸ್ಟ್ರೇಲಿಯಾದ ಹೆಂಗಳೆಯರ ತಂಡಗಳ ನಡುವೆ ನಡೆದ ದಾಂಡಾಟದ ಪಯ್ಪೋಟಿಯಲ್ಲಿ ಮೊದಲ ಬಾರಿಗೆ ಗುಲಾಬಿ ಬಣ್ಣದ ಚೆಂಡುಗಳನ್ನು ಬಳಸಲಾಯಿತು. ಪಯ್ಪೋಟಿಯ ಮೊದಲಲ್ಲಿ ಚೆಂಡು ಕೆಂಪು ಚೆಂಡಿಗಿಂತ ಹೆಚ್ಚು **ತಿರುವು**(Spin) ಪಡೆಯಿತು. ಅಲ್ಲದೇ ಪೋಟಿ

ಸಾಗಿದಂತೆ ಬೇಗನೆ ತನ್ನ ಗುಣಮಟ್ಟವನ್ನು ಕಳೆದುಕೊಂಡಿತು. ಇದು ಗುಲಾಬಿ ಚೆಂಡಿನ ಬಳಕೆಯ ಕುರಿತು ಗೊಂದಲ ಮೂಡಿಸಿತು. ಈ ಕಾರಣಕ್ಕೆ ಗುಲಾಬಿ ಬಣ್ಣದ ಚೆಂಡನ್ನು ಅಯ್.ಸಿ.ಸಿ ಬಳಕೆಯಿಂದ ತೆಗೆದು ಹಾಕಿತು.

ಇವೆಲ್ಲಾ ಕಾರಣಗಳನ್ನು ಗಮನದಲ್ಲಿಟ್ಟುಕೊಂಡು ಅಯ್.ಸಿ.ಸಿ ದಾಂಡಾಟದ ಕಾನೂನುಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಿತು. ಅದರಂತೆ ಟೆಸ್ಟ್ ಪಯ್ಪೋಟಿಯಲ್ಲಿ ಬಳಸುವ ಚೆಂಡುಗಳು ಕೆಂಪು ಬಣ್ಣದಲ್ಲಿರುತ್ತದೆ. ಮತ್ತು ಒಂದು ನಾಳಿನಾಟದಲ್ಲಿ ಹೊಳೆಯುವ ಬಿಳಿ ಚೆಂಡುಗಳನ್ನು ಬಳಸಲಾಗುತ್ತದೆ. ಈ ನಿಯಮವನ್ನು ನಾಡೊಳಗಣ ದಾಂಡಾಟದಲ್ಲೂ ಮುಂದುವರೆಸಲಾಗಿದೆ. ಆದರೆ ನಾಡೊಳಗಣ ದಾಂಡಾಟದ ತರಬೇತಿಯ ಹೊತ್ತಿನಲ್ಲಿ ಬಿಳಿ, ಕೆಂಪು ಬಣ್ಣದ ಚೆಂಡಿನ ಜೊತೆಗೆ ಗುಲಾಬಿ, ಹಳದಿ ಮತ್ತು ಕಿತ್ತಳೆ ಬಣ್ಣದ ಚೆಂಡನ್ನು ಬಳಸುವುದೂ ಉಂಟು.

*(**ಮಾಹಿತಿ ಮತ್ತು ಚಿತ್ರ ಸೆಲೆ:** itsonlycricket.com, bajubekasbranded.com, lordscricketballs.co.uk )*

# ಸೋಲರಿಯದ ಇಂಡಿಯಾ, ಗೆಲುವು ಕಾಣದ ಪಾಕ್




ಇಂಡಿಯಾ-ಪಾಕಿಸ್ತಾನ! ಈ ಎರಡು ನಾಡುಗಳ ನಡುವಣ ಕೊಂಡಿ ಹೇಗೇ ಇದ್ದರೂ, ಮಂದಿ ಮಾತ್ರ ಹೆಚ್ಚಿನ ವಿಚಾರವನ್ನು ಸೋಲು ಗೆಲುವಿನ ಲೆಕ್ಕಾಚಾರದಲ್ಲಿಯೇ ನೋಡುತ್ತಾರೆ. ಇದು ದಾಂಡಾಟದ ಪಯ್ಪೋಟಿಯಿಂದ ಏನೂ ಹೊರತಾಗಿಲ್ಲ.1952ರಲ್ಲಿ ಮೊದಲ ಬಾರಿಗೆ ಇಂಡಿಯಾ ಮತ್ತು ಪಾಕ್ ನಡುವೆ ಟೆಸ್ಟ್ ಪಯ್ಪೋಟಿಯನ್ನು ನಡೆಸಲಾಯಿತು. ಬಳಿಕ 1978ರಲ್ಲಿ ಇತ್ತಂಡಗಳು ಮೊದಲ ಬಾರಿಗೆ ಒಂದು ದಿನದಾಟದ ಪಯ್ಪೋಟಿಯಲ್ಲಿ ಎದುರಾದವು. ಅಲ್ಲಿಂದ ಇಲ್ಲಿಯ ವರೆಗೆ ಅರವತ್ತು ಟೆಸ್ಟ್ ಪಯ್ಪೋಟಿ, ನೂರ ಇಪ್ಪತ್ತೇಳು ಒಂದು ದಿನದ ದಾಂಡಾಟ ಪಯ್ಪೋಟಿಗಳು ನಡೆದಿವೆ. ಇದರಲ್ಲಿ ಎರಡೂ ನಾಡುಗಳು ಸೋಲು ಗೆಲುವಿನ ರುಚಿ ನೋಡಿವೆ.

ಆದರೆ ಪ್ರತೀ ಬಾರಿ ಹೊಸ ಪಯ್ಪೋಟಿಗಳು ನಡೆದಾಗಲೂ ಕುತೂಹಲ ಮಾತ್ರ ಮೊದಲಿನಂತೆಯೇ ಇರುತ್ತದೆ. ಅದರಲ್ಲೂ ವಿಶ್ವಕಪ್ ಪಯ್ಪೋಟಿಯಲ್ಲಿ ಇತ್ತಂಡಗಳು ಮಕಾಮುಕಿಯಾದರೆ ಮಂದಿಯೊಳಗೆ ಅದರ ಹುರುಪೇ ಬೇರೆ. ಅಂತೆಯೇ ಒಟ್ಟು ಆರು ಬಾರಿ ಇತ್ತಂಡಗಳು ವಿಶ್ವಕಪ್‌ನಲ್ಲಿ ಮುಕಾಮುಕಿಯಾಗಿದೆ. ವಿಶೇಶವೆಂದರೆ ಆ ಆರೂ ಬಾರಿ ಕೂಡ ಪಾಕ್ ಇಂಡಿಯಾ ತಂಡದೆದುರು ಸೋತಿದೆ. ಸಿಡ್ನಿ, ಬೆಂಗಳೂರು, ಮ್ಯಾಂಚೆಸ್ಟರ್, ಸೆಂಚೂರಿಯನ್, ಮೊಹಾಲಿ, ಅಡಿಲೇಡ್ ಹೀಗೆ ಪ್ರತೀ ಬಾರಿ ವಿಶ್ವಕಪ್ ಮುಕಾಮುಕಿಗೆ ಅಂಗಣಗಳು ಬದಲಾದರೂ ಹಿನ್ನಡವಳಿ ಮಾತ್ರ ಬದಲಾಗುತ್ತಿಲ್ಲ. ಅದೆಶ್ಟೇ ಗಟ್ಟಿ ತಂಡವನ್ನು ಕಟ್ಟಿಕೊಂಡು ಬಂದರೂ, ಪಾಕ್ ಮಾತ್ರ ಇಂಡಿಯಾ ತಂಡದೆದುರು ಸೋಲಿನ ಕಹಿ ಉಣ್ಣುತ್ತಿದೆ, ಹಾಗೆಯೇ ವಿಶ್ವಕಪ್‌ನಲ್ಲಿ ತನ್ನ ಹಿನ್ನಡವಳಿಯನ್ನು ಮರುಕಳಿಸುತ್ತಾ ಬಂದಿರುವ ಇಂಡಿಯಾ ಗೆಲುವಿನ ಸಿಹಿ ಉಣ್ಣುತ್ತಿದೆ. ಹೀಗೆ ವಿಶ್ವಕಪ್ ಎಂಬ ದೊಡ್ಡಾಟದಲ್ಲಿ ಇತ್ತಂಡಗಳ ಸೋಲು ಗೆಲುವುಗಳತ್ತ ಬೆಳಕು ಚೆಲ್ಲುವ ಸಣ್ಣ ಬರಹವಿದು.

**1992ರ ವಿಶ್ವಕಪ್**




ಇದು ಇತ್ತಂಡಗಳ ಪಾಲಿಗೆ ವಿಶ್ವಕಪ್ ಎಂಬ ದೊಡ್ಡಾಟದ ಮುಕಾಮುಕಿಗೆ ಮೊದಲ ವೇದಿಕೆಯಾದ ಹಿರಿಮೆಯನ್ನು ಹೊತ್ತುಕೊಂಡಿದೆ. ಮಾರ್ಚ್ 4ರಂದು ಆಸ್ಟ್ರೇಲಿಯಾದ ಸಿಡ್ನಿ ಅಂಗಣದಲ್ಲಿ ನಡೆದ ಹೊನಲು ಬೆಳಕಿನ ದಾಂಡಾಟದ ಪಯ್ಪೋಟಿಗೆ ಇಡೀ ಜಗತ್ತು ಹುಬ್ಬೇರಿಸಿ ಬೆರಗುಗಣ್ಣಿನಿಂದ ನೋಡಿದ ಹೊತ್ತದು. ಶತ್ರು ನಾಡುಗಳು ಎಂದೇ ಮಂದಿಯ ಮನದಲ್ಲಿ ಅಚ್ಚೊತ್ತಿರುವಾಗ ದೊಡ್ಡಾಟದ ಈ ಪಯ್ಪೋಟಿ ಎಲ್ಲರನ್ನು ದಾಂಡಾಟದತ್ತ ಬಹುವಾಗಿ ಸೆಳೆಯಿತು.

**ಮಹಮ್ಮದ್ ಅಜರುದ್ದೀನ್** ಮುಂದಾಳತ್ವದಲ್ಲಿ ಅಂಗಣಕ್ಕಿಳಿದ ಇಂಡಿಯಾ ಪಡೆ,**ಇಮ್ರಾನ್ ಕಾನ್** ಮುಂದಾಳತ್ವದ ಪಾಕ್ ಪಡೆಯನ್ನು ಎದುರಿಸಿತು. ನಾಣ್ಯ ಚಿಮ್ಮುಗೆಯಲ್ಲಿ ಗೆದ್ದ ಇಂಡಿಯಾ ತಂಡ ಮೊದಲು ದಾಂಡುಗಾರಿಕೆ ನಡೆಸಲು ಬಯಸಿತು. 25 ಓಟ ಗಳಿಸುವಶ್ಟರಲ್ಲಿ **ಕ್ರಿಸ್ ಶ್ರೀಕಾಂತ್** ರವರನ್ನು ಕಳೆದುಕೊಂಡ ಇಂಡಿಯಾ ತಂಡ ಮೊದಲಿಗೆ ತುಸು ಕಹಿ ಅನುಬವ ಪಡೆದುಕೊಂಡಿತು. ಬಳಿಕ ಅಜರುದ್ದೀನ್ ಮತ್ತು **ಜಡೇಜಾ**ರ ಹೊತ್ತಿನರಿವಿನ ದಾಂಡುಗಾರಿಕೆಯಿಂದ ಹಿಡಿತ ಸಾದಿಸತೊಡಗಿತು. ಆಗಶ್ಟೇ ದಾಂಡಾಟದಿಂದ ಜಗತ್ತಿನೆಲ್ಲೆಡೆ ಮಿಂಚು ಹರಿಸ ತೊಡಗಿದ್ದ **ಸಚಿನ್ ತೆಂಡೂಲ್ಕರ್** ಅವರಿಗೂ ಅದು ಮೊದಲ ವಿಶ್ವಕಪ್ ಕೂಟ. ಈ ಪಯ್ಪೋಟಿಯಲ್ಲಿ ಹುತ್ತರಿ ಕಳೆದುಕೊಳ್ಳದೆ 54 ಓಟ ಗಳಿಸಿದ ಸಚಿನ್ ಇಂಡಿಯಾ ತಂಡ 7 ಹುತ್ತರಿ ಕಳೆದುಕೊಂಡು 216 ಓಟ ಗಳಿಸುವುದರಲ್ಲಿ ಹೆಚ್ಚಿನ ಪಾತ್ರ ವಹಿಸಿದ್ದರು. ಪಾಕ್ ಆಟಗಾರರ ಮೆಲ್ಲಗಿನ ಎಸೆತಗಟ್ಟಿನ ಕಾರಣದಿಂದಾಗಿ ಪಯ್ಪೋಟಿಯನ್ನು 49 ಎಸೆತಗಟ್ಟುಗಳಿಗೆ ಸೀಮಿತಗೊಳಿಸಲಾಯಿತು.

49 ಎಸೆತಗಟ್ಟುಗಳಿಂದ 217 ಓಟಗಳನ್ನು ಗಳಿಸುವ ಗುರಿ ಪಡೆದ ಪಾಕ್ ಪಡೆ **ಕಪಿಲ್ ದೇವ್** ಮತ್ತು **ಪ್ರಬಾಕರ್** ದಾಳಿಗೆ ಕುಸಿತದಿಂದಲೇ ಮೊದಲ್ಗೊಂಡಿತು. ಇಲ್ಲಿಂದ ಪಯ್ಪೋಟಿಯ ಕೊನೆಯ ಹಂತದ ವರೆಗೂ ಇಂಡಿಯಾ ತಂಡ ಪಯ್ಪೋಟಿಯ ಮೇಲೆ ತನ್ನ ಹಿಡಿತ ಸಾದಿಸುತ್ತಾ ಹೋಯಿತು. ಪಾಕ್ ಪರ **ಆಮಿರ್ ಸೊಹೇಲ್** 62 ಮತ್ತು **ಜಾವೆದ್ ಮಿಯಾಂದಾದ್** 40 ಓಟಗಳನ್ನು ಗಳಿಸಿದ್ದು ಬಿಟ್ಟರೆ ಬೇರೆ ಯಾವುದೇ ನೆರವು ಬರಲಿಲ್ಲ. ಕೊನೆಗೆ ಪಾಕ್ 173 ಓಟಗಳನ್ನು ಗಳಿಸಿ ತನ್ನೆಲ್ಲಾ ಹುತ್ತರಿ ಕಳೆದುಕೊಳ್ಳುವ ಮೂಲಕ ಇಂಡಿಯಾ 43 ಓಟಗಳಿಂದ ವಿಶ್ವಕಪ್‌ನ ಮೊದಲ ಪಯ್ಪೋಟಿಯನ್ನು ಗೆದ್ದುಕೊಂಡಿತು. ಇಂಡಿಯಾ ಪರ ಕಪಿಲ್ ದೇವ್, **ಶ್ರೀನಾತ್** ಮತ್ತು ಪ್ರಬಾಕರ್ ತಲಾ ಎರಡು ಹುತ್ತರಿ ಎಗರಿಸಿ ಮಿಂಚಿದ್ದರು.

* ಮಹಮ್ಮದ್ ಅಜರುದ್ದೀನ್ ಅವರು ಕ್ರಿಸ್ ಶ್ರೀಕಾಂತ್ ರವರ ಬಳಿಕ 1990ರಲ್ಲಿ ಇಂಡಿಯಾದ ಮುಂದಾಳತ್ವವನ್ನು ವಹಿಸಿಕೊಂಡರು. ಇಲ್ಲಿಂದ ದಾಂಡುಗಾರಿಕೆಯಲ್ಲಿ ಬಾರಿ ಹಿನ್ನಡೆ ಗಳಿಸಿದ ಅಜರುದ್ದೀನ್ ಓಟ ಗಳಿಸಲು ಪರದಾಡಿದರು. ಆದರೆ 1992 ವಿಶ್ವಕಪ್‌ನ ಒಳ್ಳೆಯ ದಾಂಡುಗಾರಿಕೆ ಮಾಡುವ ಮೂಲಕ ಇಂಡಿಯಾ ಪರ ವಿಶ್ವಕಪ್‌ನಲ್ಲಿ ಹೆಚ್ಚು ಓಟ ಗಳಿಸಿದ ಪೋಟಿಗಾರ ಎಂದೆನಿಸಿಕೊಂಡರು.

* ಇಮ್ರಾನ್ ಕಾನ್‌ರವರು 1987ರಲ್ಲಿ ದಾಂಡಾಟದಿಂದ ಬಿಡುವು ಪಡೆದ ಹೊತ್ತಿನಲ್ಲಿ, ಪಾಕಿಸ್ತಾನದ ಅದ್ಯಕ್ಯ ಜನರಲ್ ಜಿಯಾ-ಉಲ್-ಹಕ್‌ರವರ ಮನವಿಯ ಮೇರೆಗೆ ಮತ್ತೆ 1988ರಲ್ಲಿ ದಾಂಡಾಟಕ್ಕೆ ಮರಳಿದ್ದರು ಮತ್ತು ಪಾಕ್‌ನ ಮುಂದಾಳತ್ವ ವಹಿಸಿಕೊಂಡರು. 1992 ವಿಶ್ವಕಪ್‌ನಲ್ಲಿ ಪಾಕ್ ಇಂಡಿಯಾ ಎದುರು ಸೋತರೂ, ಕೊನೆ ಹಂತದ ಪಯ್ಪೋಟಿಯಲ್ಲಿ ಇಂಗ್ಲೆಂಡ್ ತಂಡವನ್ನು ಸೋಲಿಸಿ ಮೊದಲ ಬಾರಿಗೆ ವಿಶ್ವಕಪ್ ಗೆದ್ದುಕೊಂಡಿತು.

**1996ರ ವಿಶ್ವಕಪ್**




ವಿಶ್ವಕಪ್ ದೊಡ್ಡಾಟದಲ್ಲಿ ಎರಡನೇ ಬಾರಿಗೆ ಇಂಡಿಯಾ ಮತ್ತು ಪಾಕ್ 1996ರಲ್ಲಿ ಎದುರಾದವು. ಇಂಡಿಯಾ, ಪಾಕಿಸ್ತಾನ ಮತ್ತು ಶ್ರೀಲಂಕಾ ಸೇರಿಸಿದಂತೆ ಮೂರು ನಾಡಿನಲ್ಲಿ ನಡೆಸಿಕೊಡಲಾಗಿದ್ದ ಈ ವಿಶ್ವಕಪ್‌ನಲ್ಲಿ, ಇಂಡಿಯಾಗೆ ಮೊದಲ ಬಾರಿ ವಿಶ್ವಕಪ್ ನಡೆಸಿಕೊಡುವ ಅವಕಾಶ ಸಿಕ್ಕಿತು. ಅಲ್ಲದೇ 1989ರಲ್ಲಿ ನಡೆದ ನೆಹರೂ ಕಪ್ ಬಳಿಕ ಪಾಕ್ ಇಂಡಿಯಾ ನೆಲದಲ್ಲಿ ಮಾಡಿದ ದಾಂಡಾಟದ ಮೊದಲ ಪಯ್ಪೋಟಿ. ಮಾರ್ಚ್ 9ರಂದು ಬೆಂಗಳೂರಿನ ಚಿನ್ನಸ್ವಾಮಿ ಅಂಗಣದಲ್ಲಿ ನಡೆದ ಹೊನಲು ಬೆಳಕಿನ ದಾಂಡಾಟದ ಪಯ್ಪೋಟಿಯು ನಿಜಕ್ಕೂ ಇಂಡಿಯಾಕ್ಕೆ ಸವಾಲಿನದ್ದಾಗಿತ್ತು. ಏಕೆಂದರೆ ಅದು ಎಂಟರಗಟ್ಟದ ಪಯ್ಪೋಟಿ. ಜೊತೆಗೆ 1992ರ ವಿಶ್ವಕಪ್ ಗೆಲ್ಲುವ ಮೂಲಕ ಪಾಕ್ ತನ್ನ ಗಟ್ಟಿತನವನ್ನು ಅದಾಗಲೇ ಜಗತ್ತಿಗೆ ತೋರಿಸಿಕೊಟ್ಟಿತ್ತು. ಅಲ್ಲದೇ ಮತ್ತೆ ವಿಶ್ವಕಪ್ ಗೆಲ್ಲಬಲ್ಲ ತಂಡವೆಂಬ ಹಣೆಪಟ್ಟಿಯನ್ನು ಕೂಡ ಅಂಟಿಸಿಕೊಂಡಿತ್ತು.

ಮತ್ತೊಂದು ವಿಶೇಶವೆಂದರೆ ಇದು ಬೆಂಗಳೂರಿನ ಚಿನ್ನಸ್ವಾಮಿ ಅಂಗಣದಲ್ಲಿ ನಡೆದ ಮೊದಲ ಹೊನಲು ಬೆಳಕಿನ ದಾಂಡಾಟದ ಪಯ್ಪೋಟಿ ಕೂಡ. ಮತ್ತೆ ನಾಣ್ಯ ಚಿಮ್ಮುಗೆಯಲ್ಲಿ ಗೆದ್ದ ಇಂಡಿಯಾ ತಂಡ ಮೊದಲು ದಾಂಡುಗಾರಿಕೆ ನಡೆಸಿತು. ಸಿದ್ದು ಅವರ 93 ಓಟಗಳು ಮತ್ತು ಕೊನೆಯ ಹೊತ್ತಿನಲ್ಲಿ ಜಡೇಜಾರ ಬಿರುಸಿನ 45 ಓಟಗಳ ನೆರವಿನಿಂದ, ಇಂಡಿಯಾ ನಿಗದಿತ 50 ಎಸೆತಗಟ್ಟುಗಳಲ್ಲಿ 8 ಹುತ್ತರಿ ಕಳೆದುಕೊಂಡು 287 ಓಟಗಳನ್ನು ಗಳಿಸಿತು. **ವಕಾರ್ ಯೂನಿಸ್** ಎಸೆದ ಕೊನೆಯ ಎಸೆತಗಟ್ಟಿನಲ್ಲಿ 22 ಓಟಗಳನ್ನು ಗಳಿಸಿದ್ದಲ್ಲದೇ, ಕೊನೆಯ 4 ಎಸೆತಗಟ್ಟುಗಳಲ್ಲಿ 57 ಓಟಗಳನ್ನು ದೋಚಿ, ಇಂಡಿಯಾ ದೊಡ್ಡ ಗಳಿಕೆಯನ್ನು ಪಾಕಿಸ್ತಾನದ ಮುಂದಿಟ್ಟಿತು.

ಹಿಂದಿನ ವಿಶ್ವಕಪ್ ನಂತೆಯೇ ಈ ವಿಶ್ವಕಪ್‌ನಲ್ಲೂ ಮೆಲ್ಲಗಿನ ಎಸೆತಗಟ್ಟಿನಿಂದಾಗಿ ಪಾಕ್ ತಂಡಕ್ಕೆ 49 ಎಸೆತಗಟ್ಟುಗಳಿಂದ 288 ಓಟಗಳನ್ನು ಗಳಿಸುವ ಗುರಿ ನೀಡಲಾಯಿತು. ಈ ಗುರಿಯನ್ನು ಅಚ್ಚುಕಟ್ಟಾಗಿ ಬೆನ್ನಟ್ಟಿದ ಪಾಕ್ ತಂಡ, ಮೊದಲ 10 ಎಸೆತಗಟ್ಟುಗಳಲ್ಲಿ 84 ಓಟಗಳನ್ನು ಗಳಿಸಿ ಇಂಡಿಯಾದ ಎಸೆತಗಾರರನ್ನು ಬೆಚ್ಚಿಬೀಳಿಸಿತು. ಆದರೆ ಆ ಬಳಿಕ **ವೆಂಕಟಪತಿ ರಾಜು** ಮತ್ತು **ಅನಿಲ್ ಕುಂಬ್ಳೆ**ಯವರ ಒಳ್ಳೆಯ ಎಸೆತಗಾರಿಕೆಯಿಂದ ಪಾಕ್ ಕುಸಿತ ಕಾಣುತ್ತಾ ಹೋಯಿತಲ್ಲದೇ, ನಿಗದಿತ 49 ಎಸೆತಗಟ್ಟುಗಳಿಂದ 9 ಹುತ್ತರಿ ಕಳೆದುಕೊಂಡು 288 ಓಟಗಳನ್ನು ಗಳಿಸಿತಶ್ಟೆ. ಆ ಮೂಲಕ ಪಾಕ್ ಮತ್ತೆ ಇಂಡಿಯಾದ ಮುಂದೆ 39 ಓಟಗಳಿಂದ ಸೋಲೊಪ್ಪಿಕೊಂಡಿತು. ಇದು 1992ರ ವಿಶ್ವಕಪ್ ಬಳಿಕ ಪಾಕ್ ಇಂಡಿಯಾದೆದುರು ಸೋತ ಮೊದಲ

ದಾಂಡಾಟದ ಪಯ್ಪೋಟಿ. ಅಲ್ಲದೇ 1987ರ ಬಳಿಕ ಪಾಕ್ ಇಂಡಿಯಾ ನಾಡಿನಲ್ಲಿ ಇಂಡಿಯಾದೆದುರು ಸೋತ ಮೊದಲ ಪಯ್ಪೋಟಿ.

* ಮತ್ತೆ ಮಹಮ್ಮದ್ ಅಜರುದ್ದೀನ್ ಅವರ ಮುಂದಾಳತ್ವದಲ್ಲಿ ಆಡಿದ್ದ ಇಂಡಿಯಾ ನಾಲ್ಕರ ಗಟ್ಟ ತಲುಪಿ ಮಂದಿಯಲ್ಲಿ ವಿಶ್ವಕಪ್ ಗೆದ್ದು ತರುವ ಕನಸು ಮೂಡಿಸಿತ್ತು. 1996ರ ವಿಶ್ವಕಪ್‌ಗೂ ಮೊದಲು ನಡೆದ ಆರು ಕೂಟಗಳಲ್ಲಿ ಅಯ್ದನ್ನು ಅಜರುದ್ದೀನ್ ಮುಂದಾಳತ್ವದಲ್ಲಿ ಇಂಡಿಯಾ ಗೆದ್ದಿದ್ದರಿಂದ ಮತ್ತೊಮ್ಮೆ ವಿಶ್ವಕಪ್ ಹೊತ್ತುತರುವ ಕನಸಿಗೆ ಅಜರುದ್ದೀನ್ ಇಂಬು ನೀಡಿದ್ದರು. ಆದರೆ ಇಂಡಿಯಾ ನಾಲ್ಕರಗಟ್ಟದಲ್ಲಿಯೇ ಸೋತು ಕೂಟದಿಂದ ಹೊರನಡೆಯಿತು.

* ಇಮ್ರಾನ್ ಕಾನ್ ಬಳಿಕ **ವಾಸಿಮ್ ಅಕ್ರಮ್** ಅವರು ಪಾಕಿಸ್ತಾನದ ಮುಂದಾಳತ್ವವನ್ನು 1993ರಲ್ಲಿ ವಹಿಸಿಕೊಂಡರು. ಆದರೆ ವಾಸಿಮ್ ಮುಂದಾಳತ್ವದಲ್ಲಿ ಪಾಕ್ ಮತ್ತೆ ವಿಶ್ವಕಪ್ ಗೆಲ್ಲಲು ಎಡವಿತು.

**1999ರ ವಿಶ್ವಕಪ್**



ಸತತವಾಗಿ ಮೂರನೇ ಬಾರಿಗೆ 1999ರ ವಿಶ್ವಕಪ್‌ನಲ್ಲಿ ಇಂಡಿಯಾ ಮತ್ತು ಪಾಕ್ ಎದುರಾದವು. ಇಂಗ್ಲೆಂಡ್, ಅಯರ್ಲೆಂಡ್ ಸೇರಿದಂತೆ ಅಯ್ದು ನಾಡುಗಳಲ್ಲಿ ನಡೆದ ಈ ವಿಶ್ವಕಪ್‌ನಲ್ಲಿ ಜೂನ್ ರಂದು ಮ್ಯಾಂಚೆಸ್ಟರ್ ಅಂಗಣದಲ್ಲಿ ಇತ್ತಂಡಗಳು ಮುಕಾಮುಕಿಯಾದವು. ಕಳೆದೆರಡು ಸೋಲಿಗೆ ಸೇಡು ತಿರಿಸುವ ತವಕ ಪಾಕಿಸ್ತಾನದ್ದಾದರೆ, ತನ್ನ ಗೆಲುವಿನ ನಡೆಯನ್ನು ಮುಂದುವರಿಸಿಕೊಂಡು ಹೋಗುವತ್ತ ಇಂಡಿಯಾ ತಂಡದ ಗಮನ. ಸಚಿನ್ ಅದಾಗಲೇ ಜಗತ್ತಿನ ಎಸೆತಗಾರರೆದೆಯಲ್ಲಿ ನಡುಕ ಹುಟ್ಟಿಸಿದ್ದರು. ಜೊತೆ ಜೊತೆಗೆ 1999ರ ವಿಶ್ವಕಪ್ **ರಾಹುಲ್ ದ್ರಾವಿಡ್** ಎಂಬ ಕರುನಾಡಿನ ಚೇತನಕ್ಕೆ ಮೊದಲ ವಿಶ್ವಕಪ್ ವೇದಿಕೆ.

ಸತತವಾಗಿ ಮೂರನೇ ಬಾರಿ ನಾಣ್ಯ ಚಿಮ್ಮುಗೆಯಲ್ಲಿ ಗೆದ್ದ ಇಂಡಿಯಾ ತಂಡ ಮೊದಲು ದಾಂಡುಗಾರಿಕೆ ನಡೆಸಿತು. ಒಳ್ಳೆಯ ದಾಂಡುಗಾರಿಕೆ ನಡೆಸಿದ ದ್ರಾವಿಡ್ 61 ಓಟಗಳನ್ನು ಗಳಿಸಿದರೆ, ಸಚಿನ್ ಮತ್ತು ಅಜರುದ್ದೀನ್ ಕೂಡ ಉತ್ತಮ ದಾಂಡುಗಾರಿಕೆಯ ನೆರವಿತ್ತರು. ಆದರೆ 50 ಎಸೆತಗಟ್ಟುಗಳಲ್ಲಿ 6 ಹುತ್ತರಿ ಕಳೆದುಕೊಂಡು 227 ಓಟಗಳನ್ನಶ್ಟೇ ಇಂಡಿಯಾ ಗಳಿಸಿತು.

ಅಂತೆಯೇ 50 ಎಸೆತಗಟ್ಟುಗಳಲ್ಲಿ 228 ಓಟಗಳನ್ನು ಗಳಿಸುವ ಗುರಿ ಪಡೆದ ಪಾಕ್, ಇಂಡಿಯಾಕ್ಕೆ ಸೋಲಿನ ಬಯ ತೋರಿಸಲು ಎಡವಿತು.**ವೆಂಕಟೇಶ್ ಪ್ರಸಾದ್** ಮತ್ತು **ಜಾವಗಲ್ ಶ್ರೀನಾತ್** ಎಂಬಿಬ್ಬರು ಕನ್ನಡಿಗರ ಎಸೆತಗಾರಿಕೆಗೆ ಬೆದರಿದ

ಪಾಕ್ 45.3 ಎಸೆತಗಟ್ಟುಗಳಲ್ಲಿ 180 ಓಟಗಳನ್ನು ಗಳಿಸುವಷ್ಟರಲ್ಲಿ ನೆಲ ಕಚ್ಚಿತು. ಇದು ಪಾಕ್ ವಿಶ್ವಕಪ್‌ನಲ್ಲಿ ಇಂಡಿಯಾದೆದುರು ಕಂಡ ಮೂರನೇ ಸೋಲು.

* ಇದು ಮಹಮ್ಮದ್ ಅಜರುದ್ದೀನ್ ಅವರ ಮುಂದಾಳತ್ವದಲ್ಲಿ ಇಂಡಿಯಾ ಆಡಿದ ಮೂರನೇ ವಿಶ್ವಕಪ್ ಕೂಟ. ಆ ಮೂಲಕ ಅತೀ ಹೆಚ್ಚು ವಿಶ್ವಕಪ್‌ಗೆ ಇಂಡಿಯಾ ತಂಡದ ಮುಂದಾಳತ್ವ ವಹಿಸಿದಾತ ಎಂಬ ಹಿರಿಮೆಯನ್ನು ಅಜರುದ್ದೀನ್ ಪಡೆದುಕೊಂಡರು.

* ವಾಸಿಮ್ ಅಕ್ರಮ್ ಅವರಿಗೆ 1887ರಿಂದಲೂ ವಿಶ್ವಕಪ್‌ನಲ್ಲಿ ಆಡಿದ ಅನುಬವವಿತ್ತು ಮತ್ತು 1996ರಲ್ಲಿ ವಾಸಿಮ್ ಮುಂದಾಳತ್ವದಲ್ಲಿ ಪಾಕ್ ವಿಶ್ವಕಪ್ ಕೂಟದಲ್ಲಿ ಪಾಲ್ಗೊಂಡಿತ್ತು. ಈ ಕಾರಣಕ್ಕೆ ಮತ್ತೆ ವಾಸಿಮ್ ಅವರಿಗೆ ಪಾಕ್ ತಂಡದ ಮುಂದಾಳತ್ವ ವಹಿಸಲಾಗಿತ್ತು. ಆದರೆ ಕೊನೆಯ ಹಂತಕ್ಕೇರಿ ಬರವಸೆ ಮೂಡಿಸಿದ್ದ ವಾಸಿಮ್ ಪಡೆ ಆಸ್ಟ್ರೇಲಿಯಾ ತಂಡದೆದುರು ಸೋಲೊಪ್ಪಿಕೊಂಡಿತು.

**<u>2003ರ ವಿಶ್ವಕಪ್</u>**



ನಾಲ್ಕನೇ ಬಾರಿಗೆ ವಿಶ್ವಕಪ್‌ನಲ್ಲಿ ಇಂಡಿಯಾ ಮತ್ತು ಪಾಕಿಸ್ತಾನ ನಾಡುಗಳ ಮುಕಾಮುಕಿಗೆ ವೇದಿಕೆ ಅಣಿಗೊಳಿಸಿದ್ದು 2003ರ ವಿಶ್ವಕಪ್ ಮಾರ್ಚ್ 1 ರಂದು ಆಪ್ರಿಕಾದ ಸೆಂಚೂರಿಯನ್ ಅಂಗಣದಲ್ಲಿ ಎದುರಾದ ಈ ಪಯ್ಪೋಟಿಯಲ್ಲಿ ಇಂಡಿಯಾ ಗೆಲ್ಲುವ ನೆಚ್ಚಿನ ತಂಡವಾಗಿ ಗುರುತಿಸಿಕೊಂಡಿತ್ತು. ಕಾರಣ**ಸೆಹವಾಗ್**, **ಯುವರಾಜ್**, **ಜಹೀರ್** ರಂತಹ ಯುವ ಪಡೆ ಮತ್ತು**ಗಂಗೂಲಿ**, ದ್ರಾವಿಡ್, ಸಚಿನ್ ರಂತಹ ಅನುಬವದ ಬಲ ಇಂಡಿಯಾದ ಬೆನ್ನಿಗಿತ್ತು. ಈ ಬಾರಿ ನಾಣ್ಯ ಚಿಮ್ಮುಗೆಯಲ್ಲಿ ಗೆದ್ದ ಪಾಕಿಸ್ತಾನ ತಂಡ ಮೊದಲು ದಾಂಡುಗಾರಿಕೆ ನಡೆಸಿತು. **ಸಯ್ಯದ್ ಅನ್ವರ್** ಅವರ ನೂರರಾಟದಿಂದ ನಿಗದಿತ 50 ಎಸೆತಗಟ್ಟುಗಳಲ್ಲಿ ಪಾಕ್ 7 ಹುತ್ತರಿ ಕಳೆದುಕೊಂಡು 273 ಓಟಗಳನ್ನು ಗಳಿಸಿತು. ಇಂಡಿಯಾ ಪರ 4 ಹುತ್ತರಿ ಗಳಿಸಿದ **ಜಹೀರ್ ಕಾನ್**ಒಳ್ಳೆಯ ಎಸೆತಗಾರ ಎಂದೆನಿಸಿಕೊಂಡರು.

ಈ ಗುರಿಯನ್ನು ಬೆನ್ನತ್ತಿದ ಇಂಡಿಯಾ ತಂಡ ಮೊದಲಲ್ಲಿ ತುಸು ಎಡವಿತಾದರೂ 12ನೇ ಎಸೆತಗಟ್ಟಿನಲ್ಲಿಯೇ 100 ಓಟಗಳ ಗಡಿ ದಾಟಿತು. ಆದರೆ ಸಚಿನ್, ದ್ರಾವಿಡ್ ಮತ್ತು ಯುವರಾಜ್ ಅವರ ಹೊತ್ತಿನರಿವಿನ ದಾಂಡುಗಾರಿಕೆಯಿಂದಾಗಿ 45.4 ಎಸೆತಗಟ್ಟುಗಳಲ್ಲಿ ಇಂಡಿಯಾ 4 ಹುತ್ತರಿಗಳನ್ನು ಕಳೆದುಕೊಂಡು ಗುರಿ ಮುಟ್ಟಿತು. ಆ ಮೂಲಕ ಇಂಡಿಯಾ ಪಾಕ್ ವಿರುದ್ದ ನಾಲ್ಕು ಗೆಲುವನ್ನು ದಾಕಲಿಸಿತು.

* ಸವ್ರವ್ ಗಂಗೂಲಿಯವರ ಮುಂದಾಳತ್ವದಲ್ಲಿ ಆಡಿದ ಇಂಡಿಯಾ ತಂಡ ಯುವಪಡೆಯಾದರೂ ಬಹಳಶ್ಟು ಗಟ್ಟಿತನ ಹೊಂದಿತ್ತು. 2003ರ ವಿಶ್ವಕಪ್ ನ ಕೊನೆಯ ಹಂತದ ವರೆಗೆ ಸಾಗಿದ ಇಂಡಿಯಾ ತಂಡ ಕೊನೆ ಹೊತ್ತಿನಲ್ಲಿ ಎಡವಿತು. ಆದರೆ ಕೂಟದಲ್ಲಿಯೇ ಉತ್ತಮ ದಾಂಡುಗಾರರನ್ನು ಹೊಂದಿದ ಗಟ್ಟಿ ತಂಡ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು.

* ಪಾಕಿಸ್ತಾನದ ಹೆಸರಾಂತ ಎಸೆತಗಾರ ವಕಾರ್ ಯೂನಸ್ ಅವರ ಮುಂದಾಳತ್ವದಲ್ಲಿ ಪಾಕ್ 2003ರ ವಿಶ್ವಕಪ್ ಕಣಕ್ಕಿಳಿದಿತ್ತು. ಆದರೆ ಎಂಟರಗಟ್ಟದಿಂದ ಪಾಕ್ ಸೋತು ಹೊರ ನಡೆಯಿತು.

**2011ರ ವಿಶ್ವಕಪ್**




2007ರಲ್ಲಿ ಮುಕಾಮುಕಿಯನ್ನು ತಪ್ಪಿಸಿಕೊಂಡಿದ್ದ ಇತ್ತಂಡಗಳು 2011ರ ವಿಶ್ವಕಪ್‌ನ ನಾಲ್ಕರ ಗಟ್ಟದಲ್ಲಿ ಮುಕಾಮುಕಿಯಾದವು. ಮಾರ್ಚ್ 30 ರಂದು ಮೊಹಾಲಿಯ ಅಂಗಣದಲ್ಲಿ ಸಾಗಿದ ಈ ಪಯ್ಪೋಟಿ ಬಾರೀ ಹೆಚ್ಚುಗಾರಿಕೆಯನ್ನು ಪಡೆದುಕೊಂಡಿತು. ಇಂಡಿಯಾ, ಶ್ರೀಲಂಕಾ ಮತ್ತು ಬಾಂಗ್ಲಾದೇಶ ಸೇರಿದಂತೆ ಮೂರು ನಾಡುಗಳಲ್ಲಿ ನಡೆದ ಈ ವಿಶ್ವಕಪ್‌ನಲ್ಲಿ ಎರಡನೇ ಬಾರಿಗೆ ಪಾಕ್ ಇಂಡಿಯಾ ನೆಲದಲ್ಲಿ ಇಂಡಿಯಾದೆದುರು ವಿಶ್ವಕಪ್ ನಲ್ಲಿ ಪಯ್ಪೋಟಿಗಿಳಿಯಿತು. ಸುಮಾರು 35000 ನೋಡುಗರೆದುರು ಮೊಹಾಲಿಯಲ್ಲಿ ನಡೆದ ಪಯ್ಪೋಟಿಯಲ್ಲಿ ಇಂಡಿಯಾ ನಾಣ್ಯ ಚಿಮ್ಮುಗೆಯಲ್ಲಿ ಗೆದ್ದು ಮೊದಲು ದಾಂಡುಗಾರಿಕೆ ವಹಿಸಿಕೊಂಡಿತು. ದಾಂಡುಗಾರರ ಉತ್ತಮ ಪೋಟಿಯಿಂದ ನಿಗದಿತ 50 ಎಸೆತಗಟ್ಟುಗಳಲ್ಲಿ ಇಂಡಿಯಾ 9 ಹುತ್ತರಿ ಕಳೆದುಕೊಂಡು 260 ಓಟಗಳನ್ನು ಗಳಿಸಿತು.

ಒಳ್ಳೆಯ ದಾಂಡುಗಾರರನ್ನು ಹೊಂದಿದ್ದ ಪಾಕ್ ಪಡೆ ಬಿರುಸಿನ ಓಟದಿಂದ ಮೊದಲ್ಗೊಂಡಿತು. ಆದರೆ ಇಂಡಿಯಾದ ಎಸೆತಗಾರರ ತಿರುಗೆಸತಗಳಿಗೆ ಓಟ ಗಳಿಸಲು ಪರದಾಡಿದ ಪಾಕ್ ಪಡೆ ಹುತ್ತರಿಗಳನ್ನು ಕಳೆದುಕೊಳ್ಳುತ್ತಾ ಕುಸಿತ ಕಂಡಿತು. 49.5 ಎಸೆತಗಟ್ಟುಗಳಲ್ಲಿ ತನ್ನೆಲ್ಲಾ ಹುತ್ತರಿಗಳನ್ನು ಕಳೆದುಕೊಂಡು 231 ಓಟಗಳನ್ನು ಗಳಿಸಿದ ಪಾಕ್, 29 ಓಟಗಳಿಂದ ಸೋಲುವ ಮೂಲಕ ತನ್ನ ಸೋಲಿನ ಅಂಕೆಯನ್ನು ಹೆಚ್ಚಿಸಿಕೊಂಡಿತು.

* ದೋನಿ ಮುಂದಾಳತ್ವದಲ್ಲಿ 20 ಎಸೆತಗಟ್ಟುಗಳ ವಿಶ್ವಕಪ್ ಕೂಟವನ್ನು ಗೆದ್ದು, ಗೆಲುವಿನ ಕುದುರೆ ಏರಿದ್ದ ಇಂಡಿಯಾ ತಂಡಕ್ಕೆ, ಮತ್ತೊಮ್ಮೆ ದೋನಿ ಮುಂದಾಳತ್ವದಲ್ಲಿ 2011ರ ಒಂದು ದಿನದಾಟದ ವಿಶ್ವಕಪ್ ದಕ್ಕಿತು. ಇದು 28 ವರುಶಗಳ ಬಳಿಕ ಇಂಡಿಯಾ ಗೆದ್ದ ಎರಡನೇ ಒಂದು ದಿನದಾಟದ ವಿಶ್ವಕಪ್.

* 2011ರ ಪಾಕ್ ನ ವಿಶ್ವಕಪ್ ಮುಂದಾಳತ್ವವನ್ನು ಶಾಹಿದ್ ಅಫ್ರೀದಿಗೆ ವಹಿಸಲಾಗಿತ್ತು. ಹಲವು ಕಾರಣಗಳಿಂದ ಅಯ್.ಸಿ.ಸಿ ಯಿಂದ ಚೀಮಾರಿ, ಪಾಕ್ ಮಂಡಳಿಯೊಂದಿಗಿನ ತಿಕ್ಕಾಟ ಮತ್ತು ತಂಡದ ಆಟಗಾರರ ನಡುವಿನ ಒಡಕು ಹೀಗೆ ಸಾಲು ಸಾಲು ಗೊಂದಲಗಳೊಂದಿಗೆ ವಿಶ್ವಕಪ್ ಅಕಾಡಕ್ಕೆ ಇಳಿದಿದ್ದ ಪಾಕ್ ತಂಡವನ್ನು ಒಗ್ಗೂಡಿಸಿ, ಒಂದು ತಂಡವಾಗಿ ಕಟ್ಟಿ, ಪಯ್ಪೋಟಿಯ ನಾಲ್ಕರ ಗಟ್ಟದ ವರೆಗೆ ತಂಡವನ್ನು ಕೊಂಡೊಯ್ದ ಹೆಗ್ಗಳಿಕೆ ಅಫ್ರೀದಿಗೆ ಸಲ್ಲುತ್ತದೆ.

**<u>2015ರ ವಿಶ್ವಕಪ್</u>**




ಇದು ವಿಶ್ವಕಪ್ 2015ರ ಹೊತ್ತು. ಕೆಲ ದಿನಗಳ ಹಿಂದಶ್ಟೇ ಇತ್ತಂಡಗಳು ಎದುರಾಗಿ ಕಾದಾಡಿದ್ದವು .ಮಾರ್ಚ್ 15 ರಂದು ಆಸ್ಟ್ರೇಲಿಯಾದ ಅಡಿಲೇಡ್ ಓವಲ್ ಅಂಗಳದಲ್ಲಿ ನಡೆದ ಇಂಡಿಯಾ ಮತ್ತು ಪಾಕ್ ನಡುವಿನ ಆರನೇ ಮುಕಾಮುಕಿಯಲ್ಲಿ ಇತ್ತಂಡಗಳು ಪಯ್ಪೋಟಿಗಿಳಿದಿದ್ದವು. ನಾಣ್ಯ ಚಿಮ್ಮುಗೆಯಲ್ಲಿ ಗೆದ್ದು ಮೊದಲು ದಾಂಡುಗಾರಿಕೆ ವಹಿಸಿಕೊಂಡ ಇಂಡಿಯಾ, **ಕೊಹ್ಲಿ** ಮತ್ತು**ರಯ್ನಾ**ರ ಒಳ್ಳೆಯ ದಾಂಡುಗಾರಿಕೆಯಿಂದ ನಿಗದಿತ 50 ಎಸೆತಗಟ್ಟುಗಳಲ್ಲಿ 7 ಹುತ್ತರಿ ಕಳೆದುಕೊಂಡು 300 ಓಟಗಳನ್ನು ಗಳಿಸಿತು. ಇದು ಇಂಡಿಯಾ ಪಾಕ್ ಎದುರು ವಿಶ್ವಕಪ್ ನಲ್ಲಿ ಗಳಿಸಿದ ಹೆಚ್ಚಿನ ಓಟ. ಮೊದಲಿನಿಂದ ಇಂಡಿಯಾದ ಪರವಾಗಿಯೇ ಸಾಗಿದ ಪೋಟಿಯಲ್ಲಿ ಪಾಕ್ ಎಲ್ಲೂ ಇಂಡಿಯಾಕ್ಕೆ ಸವಾಲಾಗಲೇ ಇಲ್ಲ. 47 ಎಸೆತಗಟ್ಟುಗಳಲ್ಲಿ ತನ್ನೆಲ್ಲಾ ಹುತ್ತರಿ ಕಳೆದುಕೊಂಡು 224 ಓಟಗಳನ್ನು ಗಳಿಸಿದ ಪಾಕ್ ಮತ್ತೆ ಸೋಲಿನತ್ತ ಮುಕ ಮಾಡಿತು. 76 ಓಟಗಳಿಂದ ಗೆದ್ದ ಇಂಡಿಯಾ ಸತತವಾಗಿ ಆರು ಬಾರಿ ಗೆದ್ದು, ಪಾಕ್ ಎದುರು ಸೋಲರಿಯದೆ ವಿಶ್ವಕಪ್ ನಲ್ಲಿ ಮುಂದುವರೆದಿದೆ.

* ಸತತವಾಗಿ ಎರಡನೇ ಬಾರಿಗೆ ವಿಶ್ವಕಪ್‌ನಲ್ಲಿ ಮುಂದಾಳತ್ವ ವಹಿಸಿಕೊಂಡಿರುವ ದೋನಿ, ಅಜರುದ್ದೀನ್ ಬಳಿಕ ಹೆಚ್ಚು ಬಾರಿ ವಿಶ್ವಕಪ್‌ನಲ್ಲಿ ಮುಂದಾಳತ್ವ ವಹಿಸಿದ ಹೆಗ್ಗಳಿಕೆ ಹೊಂದಿದ್ದಾರೆ. ಇವರ ಮುಂದಾಳತ್ವದಲ್ಲಿ ಈ ಬಾರಿ ವಿಶ್ವಕಪ್ ಗೆಲ್ಲುವ ನೆಚ್ಚಿನ ತಂಡಗಳಲ್ಲಿ ಇಂಡಿಯಾವೂ ಒಂದೆನೆಸಿಕೊಂಡಿದೆ.

* ಸತತ ಸೋಲುಗಳಿಂದ ಕಂಗೆಟ್ಟಿದ್ದ ಪಾಕಿಸ್ತಾನಕ್ಕೆ ಕೆಲವು ಹಿರಿಯ ಪೋಟಿಗಾರರ ಜೊತೆ ಪೂರ್ತಿ ಅನಾನುಬವಿಗಳನ್ನು ಜೊತೆಗೂಡಿಸಿ ಬಂದಿರುವ ಪಾಕ್ ತಂಡವನ್ನು ಈ ಬಾರಿ ಮಿಸ್ಬಾ-ಉಲ್-ಹಕ್ ಮುನ್ನಡೆಸುತ್ತಿದ್ದಾರೆ. ಈ ಹಿಂದೆ ನಡೆದಿದ್ದ ಕೆಲ ಇಪ್ಪತ್ತು ಎಸೆತಗಟ್ಟುಗಳ ವಿಶ್ವಕಪ್ ನಲ್ಲಿ ಮಿಸ್ಬಾ ಪಾಕ್ ತಂಡವನ್ನು ಮುನ್ನಡೆಸಿದ್ದರು.

***(ಮಾಹಿತಿ ಸೆಲೆ: en.wikipedia.org)***

***( ಚಿತ್ರ ಸೆಲೆ: canindia, cricketcountry.com, xcitefun.net, boomlive.in, sachinist.com, timesofindia,imgci.com)***

# ಕ್ರಿಕೆಟ್ ವಿಶ್ವಕಪ್: ಒಂದು ಕಿರುನೋಟ



ಅಯ್.ಸಿ.ಸಿ ದಾಂಡಾಟ(ಕ್ರಿಕೆಟ್)ದ ವಿಶ್ವಕಪ್, ಜಗತ್ತಿನ ಹೆಸರಾಂತ ಒಂದು ದಿನದ ನಾಡುನಡು(International)ವಿನ ದಾಂಡಾಟದ ಕೂಟವಾಗಿದೆ. ಸುಮಾರು ನಾಲ್ಕು ವರುಶಗಳಿಗೊಮ್ಮೆ ನಡೆಯುವ ಈ ಕೂಟವನ್ನು ಅಯ್.ಸಿ.ಸಿ ತನ್ನ ಮುಂದಾಳ್ತನದಲ್ಲಿ ನಡೆಸಿಕೊಡುತ್ತದೆ. ದಾಂಡಾಟದ ಪಾಲಿಗೆ ವಿಶ್ವಕಪ್ ಎನ್ನುವುದು ಅತ್ಯಂತ ಹೆಚ್ಚುಗಾರಿಕೆಯ ಮತ್ತು ದಾಂಡಾಟದಲ್ಲಿಯೇ ಒಂದು ಮಯ್ಲಿಗಲ್ಲಿದ್ದಂತೆ. ಈ ಕಾರಣಕ್ಕೆ ಪೋಟಿಗಾರರು ವಿಶ್ವಕಪ್ ಕೂಟವನ್ನು ತುಂಬಾ ಎಚ್ಚರವಹಿಸಿ ಆಡುತ್ತಾರೆ. ಟೆಸ್ಟ್ ಆಡುವ ತಂಡಗಳು, ಒಂದು ದಿನದ ನಾಡುನಡುವಿನ ಮಟ್ಟದ ದಾಂಡಾಟದಲ್ಲಿ ಪಾಲ್ಗೊಳ್ಳುವ ತಂಡಗಳು ಮತ್ತು ವಿಶ್ವಕಪ್ ಅರ್ಹತೆಯ ಸುತ್ತಿನ ಪಯ್ಪೋಟಿಗಳಲ್ಲಿ ಅರ್ಹತೆ ಪಡೆದಿರುವ ತಂಡಗಳು ವಿಶ್ವಕಪ್‌ನಲ್ಲಿ ಪಯ್ಪೋಟಿ ನಡೆಸುತ್ತವೆ. ಇದು **ವಿಶ್ವಕಪ್-2015** ನ ಹೊತ್ತು. ಈ ಬಾರಿಯ ವಿಶ್ವಕಪ್ ಕುರಿತು ಈಗಾಗಲೇ ಬಿಸಿ ಬಿಸಿಯಾಗಿ ಮಾತುಕತೆಗಳು ಮಂದಿಯ ನಡುವೆ ನಡೆಯುತ್ತಿದೆ. ಈ ಹೊತ್ತಿನಲ್ಲಿ ವಿಶ್ವಕಪ್ ಎಂಬ ದೊಡ್ಡಾಟ ಹುಟ್ಟಿ ಬೆಳೆದು ಬಂದ ದಾರಿಯೆಡೆಗೆ ಬೆಳಕು ಚೆಲ್ಲುವ ಪ್ರಯತ್ನವೇ ಈ ಬರಹ.

ಜಗತ್ತು ಪಯ್ಪೋಟಿಯನ್ನು ತನ್ನ ಪ್ರತಿದಿನದ ಮನರಂಜನೆಗಾಗಿ ಬಳಸಿಕೊಳ್ಳಲು ಶುರುವಿಟ್ಟಿದ್ದ ಹೊತ್ತಿನಲ್ಲಿ ಮಂದಿಯನ್ನು ಹೆಚ್ಚಾಗಿ ಸೆಳೆದದ್ದು ದಾಂಡಾಟ. ಈ ಆಟ ಮೊದಲು ಹುಟ್ಟಿದ್ದು ಇಂಗ್ಲೆಂಡ್ ನಾಡಲ್ಲೇ ಆದರೂ ಮುಂದೆ ಇಂಗ್ಲೆಂಡ್ ನ ಗಡಿ ದಾಟಿ ಬೇರೆ ನಾಡುಗಳತ್ತಲೂ ಮುಕ ಮಾಡಿತು. ಅದರಲ್ಲಿಯೂ ಅಮೇರಿಕಾ ನಾಡಿನ ಮಂದಿಯನ್ನು ದಾಂಡಾಟ ಬಹುವಾಗಿಯೇ ಸೆಳೆದಿತ್ತು. ಇದರಿಂದ ಇಂಗ್ಲೆಂಡ್ ನಾಡನ್ನು ಹೊರತುಪಡಿಸಿ ಬೇರೊಂದು ಸ್ವಂತಂತ್ರ ನಾಡಿನಲ್ಲಿಯೂ ದಾಂಡಾಟ ಗಟ್ಟಿಯಾಗಿ ಬೇರೂರತೊಡಗಿತ್ತು. ಆ ಹೊತ್ತಿನಲ್ಲಿ ದಾಂಡಾಟವನ್ನೇ ಹೋಲುವ ಬೇರೊಂದು ಆಟವನ್ನು ಅಮೇರಿಕನ್ನರು ಕಂಡುಕೊಂಡರು ಮತ್ತು ತಮ್ಮ ನಾಡಿನಲ್ಲಿ ಹುಟ್ಟಿದ ಆ ಆಟಕ್ಕೆ ಬಹುವಾಗಿ ಬೆಂಬಲಿಸಿದರು. ಆ ಮೂಲಕ ಅಮೇರಿಕನ್ನರ ಮನೆಮಾತಾದದ್ದೇ '**ಬೇಸ್‌ಬಾಲ್**' ಪಯ್ಪೋಟಿ.

ದಾಂಡಾಟದ ಟೆಸ್ಟ್ ಪಯ್ಪೋಟಿಯಿಂದ ಬೇಸತ್ತಿದ್ದ ಮಂದಿ ಹೊಸದೊಂದು ಬದಲಾವಣೆಗೆ ಹವಣಿಸತೊಡಗಿದ್ದರು. ಆಗ ತಾನೆ ಬೆಳೆಯುತ್ತಿದ್ದ ಬೇಸ್‌ಬಾಲ್ ಆಟ ಮಂದಿಯನ್ನು ದಾಂಡಾಟದಿಂದ ತನ್ನತ್ತ ಸೆಳೆಯತೊಡಗಿತು. ಒಂದು ಕಡೆ 'ಬೇಸ್‌ಬಾಲ್' ದೊಡ್ಡಾಟ ಎಂದು ಕರೆಸಿಕೊಳ್ಳುವ ಹೊತ್ತಿಗೆ ದಾಂಡಾಟದ ನಿಲುವು ಅಮೇರಿಕಾದಲ್ಲಿ ಅಲುಗಾಡ ತೊಡಗಿತ್ತು. ಆದರೂ

ದಾಂಡಾಟವು ಅದಾಗಲೇ ಆಸ್ಟ್ರೇಲಿಯಾ, ಇಂಡಿಯಾ ನಾಡುಗಳಲ್ಲಿ ತನ್ನ ಬೇರನ್ನು ಗಟ್ಟಿಗೊಳಿಸಿಕೊಳ್ಳುತ್ತಿತ್ತು. ತನ್ನ ನಿಯಮಗಳಲ್ಲಿ ತುಸು ಬದಲಾವಣೆಗಳನ್ನು ಮಾಡಿಕೊಂಡು ಮಾರ್ಪಾಡಾಗ ತೊಡಗಿತ್ತು. ಆಗ ಹುಟ್ಟಿದ್ದೇ ವಿಶ್ವಕಪ್ ಎಂಬ ದೊಡ್ಡಕೂಟ. ಇದು ಜಗತ್ತಿನಾದ್ಯಂತ ಬಾರಿ ಸದ್ದನ್ನು ಮಾಡಿದ್ದಲ್ಲದೇ, ದಾಂಡಾಟ ತನ್ನ ಹಳೆಯ ಹಿರಿಮೆಯನ್ನು ಮರಳಿ ಪಡೆದುಕೊಳ್ಳುವಲ್ಲಿ ದೊಡ್ಡ ಪಾಲು ಪಡೆದುಕೊಂಡಿತು.

ಮೊಟ್ಟಮೊದಲ ನಾಡುನಡುವಿನ ದಾಂಡಾಟದ ಪಯ್ಪೋಟಿಯು 1844 ರಲ್ಲಿ ನ್ಯೂಯಾರ್ಕ್, ಕೆನಡಾ ಮತ್ತು ಅಮೆರಿಕಾ ನಾಡುಗಳ ನಡುವೆ ನಡೆಯಿತು. 1877ರಿಂದ ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ನಾಡುಗಳ ನಡುವೆ ಬಹಳಶ್ಟು ಟೆಸ್ಟ್ ಪಯ್ಪೋಟಿಗಳು ಏರ್ಪಟ್ಟವು. ದಕ್ಶಿಣ ಆಪ್ರಿಕಾ, ಟೆಸ್ಟ್ ಪಯ್ಪೋಟಿ ನಡೆಸುವ ನಾಡುಗಳ ಪಟ್ಟಿಗೆ 1889ರಲ್ಲಿ ಸೇರಿಕೊಂಡಿತು. ಇದು ಹೆಚ್ಚಿನ ಟೆಸ್ಟ್ ಕೂಟಗಳು ನಡೆಯಲು ಕಾರಣವಾಯಿತು. 1900ರಲ್ಲಿ ನಡೆದ ಪ್ಯಾರಿಸ್ ಒಲಿಂಪಿಕ್ ಕ್ರೀಡಾಕೂದಲ್ಲಿ ದಾಂಡಾಟವನ್ನೂ ಸೇರಿಸಿಕೊಳ್ಳಲಾಯಿತು. ಇದರ ಕೊನೆಯ ಹಂತದ ಪಯ್ಪೋಟಿಯಲ್ಲಿ ಗ್ರೇಟ್ ಬ್ರಿಟನ್ ತಂಡವು ಪ್ರಾನ್ಸ್ ತಂಡವನ್ನು ಸೋಲಿಸಿ ಚಿನ್ನದ ಪದಕ ಗೆದ್ದುಕೊಂಡಿತು. ದಾಂಡಾಟವು ಒಲಿಂಪಿಕ್ ಕೂಟದ ಅಂಗವಾಗಿದ್ದು ಇದೇ ಮೊದಲು ಹಾಗೂ ಕೊನೆಯ ಬಾರಿ. ಬಳಿಕ ದಾಂಡಾಟಕ್ಕೆ ಒಲಂಪಿಕ್‌ನಲ್ಲಿ ಅವಕಾಶವನ್ನು ಕೊಡಲಿಲ್ಲ.

ಒಲಂಪಿಕ್‌ನಲ್ಲಿ ಮೊದಲು ಪಾಲ್ಗೊಳ್ಳುವ ಮೂಲಕ ದಾಂಡಾಟವು ಲಾಬವೆತ್ತಿಕೊಂಡಿತು. ಒಲಂಪಿಕ್‌ನ ಗೆಲುವು ದಾಂಡಾಟದ ದೊಡ್ಡ ಮಟ್ಟದ ಕೂಟಗಳನ್ನು ನಡೆಸುವ ಕನಸುಗಳಿಗೆ ರೆಕ್ಕೆ ಮೂಡಿಸಿತು. ಈ ಕಾರಣಕ್ಕೆ 1912ರಲ್ಲಿ ನಾಡುನಡುವಿನ ಮಟ್ಟದಲ್ಲಿ ಮೊಟ್ಟಮೊದಲ ಮೂರು ತಂಡಗಳನ್ನೊಳಗೊಂಡ ತ್ರಿಕೋನ ಟೆಸ್ಟ್ ಕೂಟವನ್ನು ಏರ್ಪಡಿಸಲಾಯಿತು. ಆ ಹೊತ್ತಿನಲ್ಲಿ ಟೆಸ್ಟ್ ಕ್ರಿಕೆಟ್ ಆಡುತ್ತಿದ್ದ ಎಲ್ಲಾ ಮೂರೂ ತಂಡಗಳಾದ ಆಸ್ಟ್ರೇಲಿಯಾ, ಇಂಗ್ಲೆಂಡ್ ಮತ್ತು ದಕ್ಶಿಣ ಆಪ್ರಿಕಾ ತಂಡಗಳು ಪಾಲ್ಗೊಂಡವು. ಆದರೆ ನೋಡುಗರನ್ನು ಸೆಳೆಯುವಲ್ಲಿ ಈ ಕೂಟ ಸೋತಿತು. ಹಾಗಾಗಿ ಕೂಟವು ನಾಡುನಡುವಿನ ಮಟ್ಟದಲ್ಲಿ ಅಂತಹ ಹೆಸರು ಮಾಡಲಿಲ್ಲ. ಕೂಟದ ಈ ಸೋಲು ಹೆಚ್ಚು ತಂಡಗಳನ್ನು ಸೇರಿಸಿ ಕೂಟವೊಂದನ್ನು ಏರ್ಪಡಿಸುವುದರಿಂದ ದೂರವಿರುವಂತೆ ಮಾಡಿತು. ಆದರೆ ಈ ಹೊತ್ತಿನಲ್ಲಿ ಎರಡು ತಂಡಗಳ ನಡುವೆ ಸತತವಾಗಿ ಟೆಸ್ಟ್ ಪಯ್ಪೋಟಿಗಳು ನಡೆಯುತ್ತಾ ಹೋದವು. ಅಲ್ಲದೇ ಮುಂದೆ ಟೆಸ್ಟ್ ಆಡುವ ನಾಡುಗಳ ಎಣಿಕೆಯು ಹಂತ ಹಂತವಾಗಿ ಹೆಚ್ಚುತ್ತಾ ಹೋಯಿತು. 1928ರಲ್ಲಿ ವೆಸ್ಟ್ ಇಂಡೀಸ್, 1930ರಲ್ಲಿ ನ್ಯೂಜಿಲೆಂಡ್, 1932ರಲ್ಲಿ ಇಂಡಿಯಾ ಮತ್ತು 1952ರಲ್ಲಿ ಪಾಕಿಸ್ತಾನ ನಾಡುಗಳನ್ನು ಅಯ್.ಸಿ.ಸಿ ಟೆಸ್ಟ್ ಆಡುವ ನಾಡುಗಳ ಪಟ್ಟಿಗೆ ಸೇರಿಸಲಾಯಿತು. ಆದರೆ ದಾಂಡಾಟ ಇದರಿಂದ ಅಂತಹ ಮಾರ್ಪಾಡುಗಳನ್ನೇನೂ ಕಂಡುಕೊಳ್ಳಲಿಲ್ಲ. ಟೆಸ್ಟ್ ಪಯ್ಪೋಟಿಗಳು ಮೊದಲಿನಂತೆ ಮೂರು, ನಾಲ್ಕು ಅತವಾ ಅಯ್ದು ದಿನಗಳವರೆಗೆ ನಡೆಯುವ ಟೆಸ್ಟ್ ಪಯ್ಪೋಟಿಯಾಗಿಯೇ ಮುಂದುವರೆದವು.

ಸುಮಾರು 1960ರ ಹೊತ್ತಿನಲ್ಲಿ ಇಂಗ್ಲಿಶ್ ಕೌಂಟಿ ತಂಡಗಳು ಕೇವಲ ಒಂದು ದಿನದಲ್ಲಿ ನಡೆದು ಕೊನೆಗೊಳ್ಳುವಂತಹ ದಾಂಡಾಟದ ಪಯ್ಪೋಟಿಗಳಲ್ಲಿ ಆಡಿದವು. ಇದಕ್ಕೆ **ಮಿಡ್ಲೆಂಡ್ಸ್ ನಾಕೌಟ್ ಕಪ್** ಎನ್ನಲಾಗುತ್ತಿತ್ತು. ಅಲ್ಲದೇ ಈ ಕೌಂಟಿ ಪಯ್ಪೋಟಿಗಳು ಇಂದಿಗೂ ನಡೆಯುತ್ತವೆ. ಇದು ಮುಂದೆ ಬೆಳೆದು 1963ರಲ್ಲಿ ಜಿಲೆಟ್ ಕಪ್ ಕೂಟದೊಂದಿಗೆ ಒಂದು ದಿನದ ದಾಂಡಾಟದ ಕೂಟಗಳು ಮೊದಲ್ಗೊಂಡವು. ಆ ಮೂಲಕ ದಾಂಡಾಟದ ಹುಟ್ಟಿಗೆ ಕಾರಣವಾದ ಇಂಗ್ಲೆಂಡ್ ನಾಡು, ಒಂದು ದಿನದ ದಾಂಡಾಟವನ್ನು ಕಂಡು ಹಿಡಿಯುವ ಮೂಲಕ ಜಗತ್ತಿನಾದ್ಯಂತ ಸದ್ದು ಮಾಡಿತ್ತು. ಅದಾಗಲೇ ಬೇಸ್‌ಬಾಲ್ ಗೆ ಮಾರು ಹೋಗುತ್ತಿದ್ದ ಪಡುವಣದ ಮಂದಿಯ ನಡುವೆ ದಾಂಡಾಟವು ಮತ್ತೆ ಎದ್ದು ನಿಂತಂತೆ ಕಂಡಿತು. ಅದಕ್ಕೆ ಸರಿಯಾಗಿ ಮಂದಿಯೂ ದಾಂಡಾಟದೆಡೆಗೆ ತುಸು ಆಸಕ್ತಿ ವಹಿಸತೊಡಗಿದರು. ಒಂದು ದಿನದಾಟದ ಕೂಟವು ಹೆಸರುವಾಸಿಯಾಗುತ್ತಾ ಹೋಯಿತು.

**ಮೊಟ್ಟಮೊದಲ ಒಂದು ದಿನದಾಟದ ಪಯ್ಪೋಟಿಯು 1971ರಲ್ಲಿ ನಡೆಯಿತು**. ಆ ವರುಶ ಮೆಲ್ಬೋರ್ನ್ ನಲ್ಲಿ ನಡೆಯಬೇಕಿದ್ದ ಆಸ್ಟ್ರೇಲಿಯಾ ಮತ್ತು ಇಂಗ್ಲೆಂಡ್ ತಂಡಗಳ ನಡುವಣ ಟೆಸ್ಟ್ ಮಳೆಯಿಂದಾಗಿ ರದ್ದಾಗಿತ್ತು. ಆದರೆ ನೋಡುಗರಿಗೆ ನಶ್ಟವಾಗಬಾರದೆಂಬ ನಿಟ್ಟಿನಲ್ಲಿ ಅದೇ ಟೆಸ್ಟ್ ನ ಅಯ್ದನೇ ದಿನ ಒಂದು ದಿನದಾಟದ ಪಯ್ಪೋಟಿಯನ್ನು ನಡೆಸಲಾಯಿತು. ಕೇವಲ ನಲವತ್ತು ಎಸೆತಗಟ್ಟುಗಳಿಗೆ (Overs) ಸೀಮಿತವಾಗಿದ್ದ ಆ ಪಯ್ಪೋಟಿಯಲ್ಲಿ, ಒಂದು ಎಸೆತಗಟ್ಟಿಗೆ ಎಂಟು ಎಸೆತಗಳಿದ್ದವು. ಟೆಸ್ಟ್ ಗಿಂತಲೂ ಒಂದು ದಿನದಾಟದ ಪಯ್ಪೋಟಿಯಲ್ಲಿ ಮಂದಿಗೆ ಹೆಚ್ಚಿನ ಆಸಕ್ತಿಯಿರುವುದನ್ನು ಈ ಆಟವು ತೋರಿಸಿಕೊಟ್ಟಿತು. ಬಳಿಕ ಸತತವಾಗಿ ಒಂದು ದಿನದಾಟದ ಪಯ್ಪೋಟಿಗಳು ಏರ್ಪಟ್ಟವು. ಅಂತೆಯೇ ಮಂದಿಯೂ ಇದರೆಡೆಗೆ ಹೆಚ್ಚಿನ ಒಲವು ತೋರಿದರು. ಈ ಗೆಲುವು ಮತ್ತೆ ಅಯ್.ಸಿ.ಸಿ ಯ ಕನಸನ್ನು ಬಿಚ್ಚಿಟ್ಟಿತು. ಅದರಂತೆಯೇ **ಮೊಟ್ಟಮೊದಲ ಬಾರಿಗೆ ದಾಂಡಾಟದ ವಿಶ್ವಕಪ್ ಕೂಟವನ್ನು 1975ರಲ್ಲಿ ಇಂಗ್ಲೆಂಡ್ ನಾಡಿನಲ್ಲಿ ನಡೆಸಿಕೊಡಲಾಯಿತು**.

**ವಿಶ್ವಕಪ್ ದಾಂಟಾಟ:**

- ಮೊದಲ ವಿಶ್ವಕಪ್ ಕೂಟದಲ್ಲಿ ಒಟ್ಟು ಎಂಟು ತಂಡಗಳು ಪಯ್ಪೋಟಿಗಿಳಿದಿದ್ದವು.
  - ಎಂಟು ತಂಡಗಳನ್ನು ಎರಡು ಗುಂಪುಗಳಾಗಿ ಮಾಡಿ, ಪ್ರತಿ ಗುಂಪಿನಲ್ಲಿಯೂ ತಲಾ ನಾಲ್ಕು ತಂಡಗಳನ್ನು ಮಾಡಲಾಯಿತು.
  - ಮೊದಲು ಗುಂಪಿನ ಹಂತ(Group Stage)ಗಳು ನಡೆದು, ಅದರಲ್ಲಿ ಪ್ರತಿ ಗುಂಪಿನ ನಾಲ್ಕೂ ತಂಡಗಳು ಪರಸ್ಪರ ಸೆಣೆಸಾಡುತ್ತಿದ್ದವು.
  - ಪ್ರತಿ ಗುಂಪಿನಿಂದ ಗೆದ್ದ ಎರಡು ತಂಡಗಳನ್ನು ನಾಲ್ಕರ ಗಟ್ಟದಲ್ಲಿ (Sami final) ಆಡಿಸಲಾಗುತ್ತದೆ. ಬಳಿಕ ಕೊನೆಯ ಹಂತದ (Final) ಪಯ್ಪೋಟಿಗಳು ನಡೆಯುತ್ತದೆ. ಸತತವಾಗಿ ನಾಲ್ಕು ವಿಶ್ವಕಪ್ ವರೆಗೆ ಎಂಟು ತಂಡಗಳು ಪಯ್ಪೋಟಿಗಿಳಿದಿದ್ದವು.
- ರಾಜಕೀಯ ತೊಂದರೆಗಳಿಂದಾಗಿ ಕೆಲ ವಿಶ್ವಕಪ್ ಕೂಟವನ್ನು ತಪ್ಪಿಸಿಕೊಂಡಿದ್ದ ಆಪ್ರಿಕಾ ತಂಡ ಮತ್ತೆ 1992ರಲ್ಲಿ ಹಿಂದಿರುಗಿತು. ಹಾಗಾಗಿ ಆ ವರುಶದ ಕೂಟದಲ್ಲಿ ಗುಂಪು ಹಂತದಲ್ಲಿ, ಒಂಬತ್ತು ತಂಡಗಳು ಪರಸ್ಪರ ಮೊದಲ ಬಾರಿಗೆ ಪಯ್ಪೋಟಿ ನಡೆಸಿದ್ದವು.
- 1996ರಲ್ಲಿ ಇನ್ನಶ್ಟು ತಂಡಗಳು ವಿಶ್ವಕಪ್ ಗೆ ಕಾಲಿರಿಸಿದವು. ಆ ಹೊತ್ತಿನಲ್ಲಿ ಎರಡು ಗುಂಪುಗಳಿದ್ದು, ಪ್ರತಿ ಗುಂಪಿನಲ್ಲಿ ತಲಾ ಆರು ತಂಡಗಳಿದ್ದವು. ಪ್ರತಿ ಗುಂಪಿನಿಂದ ಮೊದಲ ನಾಲ್ಕು ತಂಡಗಳು ಎಂಟರ ಗಟ್ಟ (Quater final) ಮತ್ತು ಅಲ್ಲಿಂದ ನಾಲ್ಕರ ಗಟ್ಟಕ್ಕೆ ಮುನ್ನಡೆದವು.
- 1999 ಮತ್ತು 2003 ವಿಶ್ವಕಪ್ ಕೂಟಗಳಲ್ಲಿ ಹೊಸ ಬದಲಾವಣೆಗಳನ್ನು ಮಾಡಲಾಯಿತು. ತಂಡಗಳನ್ನು ಎರಡು ಗುಂಪುಗಳನ್ನಾಗಿ ವಿಂಗಡಿಸಲಾಯಿತು. ಪ್ರತಿ ಗುಂಪಿನಿಂದ ಮೊದಲ ಮೂರು ತಂಡಗಳು ಆರರ ಗಟ್ಟ(Super six)ಕ್ಕೆ ಮುನ್ನಡೆದವು. ಆರರ ಗಟ್ಟದಲ್ಲಿ ಒಳ್ಳೆಯ ಪಯ್ಪೋಟಿ ನಡೆಸುವ ನಾಲ್ಕು ತಂಡಗಳು ನಾಲ್ಕರ ಗಟ್ಟವೇರುತ್ತವೆ. ಸೋತ ಎರಡು ತಂಡಗಳು ಕೂಟದಿಂದ ಹೊರನಡೆಯುತ್ತವೆ. ನಾಲ್ಕರ ಗಟ್ಟದ ಬಳಿಕ ಕೊನೆಯ ಹಂತದ ಪಯ್ಪೋಟಿಗಳು ನಡೆಯುತ್ತಿದ್ದವು.
- 2007ರ ವಿಶ್ವಕಪ್ ಕೂಟದಲ್ಲಿ 16 ತಂಡಗಳಿದ್ದ ಕಾರಣ ತಂಡಗಳನ್ನು ನಾಲ್ಕು ಗುಂಪುಗಳಾಗಿ ಮಾಡಿ, ಪ್ರತಿಯೊಂದು ಗುಂಪಿನಲ್ಲಿ ಒಳ್ಳೆಯ ಪಯ್ಪೋಟಿ ನಡೆಸುವ ಎರಡು ತಂಡಗಳಿಂದ ಎಂಟರ ಗಟ್ಟವನ್ನು (Super eight) ಮಾಡಲಾಯಿತು. ಇಲ್ಲಿ ಗೆಲ್ಲುವ ನಾಲ್ಕು ತಂಡಗಳು ನಾಲ್ಕರ ಗಟ್ಟಕ್ಕೆ ಬಂದು ಮುಂದೆ ಕೊನೆಯ ಹಂತದ ಪಯ್ಪೋಟಿಯೊಂದಿಗೆ ಕೂಟವು ಕೊನೆಗೊಂಡಿತ್ತು.

- 2011ರ ವಿಶ್ವಕಪ್ ಕೂಟದಲ್ಲಿ ಒಟ್ಟು 14 ತಂಡಗಳು ಪಾಲ್ಗೊಂಡಿದ್ದವು. ಪ್ರತಿ ಗುಂಪಿಗೆ ಏಳು ತಂಡಗಳು ಮಾಡಿ, ಅಲ್ಲಿ ಗೆದ್ದವರಿಗೆ ಕ್ರಮವಾಗಿ ಎಂಟರ ಗಟ್ಟ, ನಾಲ್ಕರ ಗಟ್ಟ ಮತ್ತು ಕೊನೆಯ ಹಂತವನ್ನು ಮಾಡಲಾಗಿತ್ತು.
- 2015ರ ವಿಶ್ವಕಪ್ ಕೂಟವು ಕೂಟ 2011ರಂತೆಯೇ ನಡೆಯಲಿದೆ.

| ವರುಶ | ವಿಶ್ವಕಪ್ ನಡೆಸಿಕೊಟ್ಟ ನಾಡು(ಗಳು) | ಕೊನೆಯ ಹಂತದ ಪಯ್ಪೋಟಿ | |
|---|---|---|---|
| | | ಗೆದ್ದವರು | ಎದುರಾಳಿ |
| 1975 | ಇಂಗ್ಲೆಂಡ್ | ವೆಸ್ಟ್ ಇಂಡೀಸ್ | ಆಸ್ಟ್ರೇಲಿಯಾ |
| 1979 | ಇಂಗ್ಲೆಂಡ್ | ವೆಸ್ಟ್ ಇಂಡೀಸ್ | ಇಂಗ್ಲೆಂಡ್ |
| 1983 | ಇಂಗ್ಲೆಂಡ್ | ಇಂಡಿಯಾ | ವೆಸ್ಟ್ ಇಂಡೀಸ್ |
| 1987 | ಇಂಡಿಯಾ, ಪಾಕಿಸ್ತಾನ | ಆಸ್ಟ್ರೇಲಿಯಾ | ಇಂಗ್ಲೆಂಡ್ |
| 1992 | ಆಸ್ಟ್ರೇಲಿಯಾ, ನ್ಯೂಜಿಲೆಂಡ್ | ಪಾಕಿಸ್ತಾನ | ಇಂಗ್ಲೆಂಡ್ |
| 1996 | ಇಂಡಿಯಾ, ಪಾಕಿಸ್ತಾನ, ಶ್ರೀಲಂಕಾ | ಶ್ರೀಲಂಕಾ | ಆಸ್ಟ್ರೇಲಿಯಾ |
| 1999 | ಇಂಗ್ಲೆಂಡ್, ವೇಲ್ಸ್, ಐರ್ಲೆಂಡ್, ನೆದರ್ಲೆಂಡ್ಸ್, ಸ್ಕಾಟ್ಲೆಂಡ್ | ಆಸ್ಟ್ರೇಲಿಯಾ | ಪಾಕಿಸ್ತಾನ |
| 2003 | ದಕ್ಶಿಣ ಆಪ್ರಿಕಾ, ಕೀನ್ಯಾ, ಜಿಂಬಾಬ್ವೆ | ಆಸ್ಟ್ರೇಲಿಯಾ | ಇಂಡಿಯಾ |
| 2007 | ವೆಸ್ಟ್ ಇಂಡೀಸ್ | ಆಸ್ಟ್ರೇಲಿಯಾ | ಶ್ರೀಲಂಕಾ |
| 2011 | ಇಂಡಿಯಾ, ಶ್ರೀಲಂಕಾ, ಬಾಂಗ್ಲಾದೇಶ | ಇಂಡಿಯಾ | ಶ್ರೀಲಂಕಾ |
| 2015 | ಆಸ್ಟ್ರೇಲಿಯಾ, ನ್ಯೂಜಿಲೆಂಡ್ | ಮುಂಗಾಣಬೇಕಿದೆ | ಮುಂಗಾಣಬೇಕಿದೆ |
| 2019 | ಇಂಗ್ಲೆಂಡ್ | ಮುಂಗಾಣಬೇಕಿದೆ | ಮುಂಗಾಣಬೇಕಿದೆ |

***(ಮಾಹಿತಿ ಸೆಲೆ:** wikipedia)*

***(ಚಿತ್ರ ಸೆಲೆ:** goodwallpaper.com***)***

# ಕ್ರಿಕೆಟ್ ಆಟದ ಕೆಲವು ತಿರುವುಗಳು



ಸುಮಾರು ಹದಿನೆಂಟನೇ ನೂರೇಡಿನಲ್ಲಿ ಹುಟ್ಟಿದ **ದಾಂಡಾಟ** (Cricket)ವು ಇಲ್ಲಿಯವರೆಗೆ ಬಹಳಶ್ಟು ಪರಿಣಾಮಕಾರಿ ಬದಲಾವಣೆಗಳೊಂದಿಗೆ ಬೆಳೆದುಬಂದಿದೆ. ಜೊತೆಗೆ ಹಿಂದಿಗಿಂತಲೂ ಇತ್ತೀಚಿನ ದಿನಗಳಲ್ಲಿ ಅಬಿಮಾನಿಗಳಲ್ಲಿ ಹೆಚ್ಚುತ್ತಿರುವ ದಾಂಡಾಟದ ಬಗೆಗಿನ ಕವ್ತುಕವು, ಹೊಸ ಬದಲಾವಣೆಗೆ ಸಾಕ್ಶಿಯಾಗುತ್ತಾ ಬಂದಿದೆ. ಸರಿ ಸುಮಾರು ಮೂರು ನೂರೇಡುಗಳಿಂದ ದಾಂಡಾಟದ ದಾಂಡು, ಚೆಂಡು, ಕ್ಶೇತ್ರ ರಕ್ಶಣೆ ಮತ್ತು ಕಾನೂನುಗಳು ಬಹಳಶ್ಟು ಬದಲಾವಣೆಗಳಲ್ಲಿ ಮಿಂದೆದ್ದು, **ಇಂದಿನ ದಾಂಡಾಟ**ವಾಗಿ (Modern Cricket) ನಮ್ಮ ಮುಂದೆ ನಿಂತಿದೆ. ಅಶ್ಟಕ್ಕೂ ಇವು ರಾತ್ರೋ ರಾತ್ರಿ ನಡೆದ ಬದಲಾವಣೆಗಳೇನಲ್ಲ ಅತವಾ ತಾನು ಹುಟ್ಟಿದ ಇಂಗ್ಲೆಂಡ್ ನಾಡೊಂದರಲ್ಲೇ ಆದ ಬದಲಾವಣೆಗಳೇನಲ್ಲ. ಬದಲಾಗಿ ಈ ಆಟವು ಮೂರು ನೂರೇಡುಗಳ ಕಾಲ ಜಗತ್ತಿನೆಲ್ಲೆಡೆ ತನ್ನ ನೆಲೆಯನ್ನು ಗಟ್ಟಿಗೊಳಿಸಿಕೊಳ್ಳುವುದರ ಜೊತೆಗೆ, ಇಂದಿನ ದಾಂಡಾಟದ ಬೇಕು ಬೇಡಗಳ ಮುನ್ನೋಟದಿಂದ ಹತ್ತು ಹಲವು ಬಗೆಗಳಲ್ಲಿ ಮಾರ್‍ಪಾಡುಗಳನ್ನು ಕಂಡುಕೊಂಡಿತು.

ಈ ಕುರಿತಂತೆ 1789ರಲ್ಲಿ ಮೊಟ್ಟ ಮೊದಲ ಬಾರಿಗೆ ದಾಂಡಾಟದ ಕಾನೂನುಗಳನ್ನು ಕ್ರಮಬದ್ದವಾಗಿ ರೂಪಿಸಲಾಯಿತು. ಇಂದಿಗೂ ದಾಂಡಾಟದ ಕಾನೂನುಗಳಡಿಯಲ್ಲೇ ದಾಂಡಾಟ ನಡೆದುಕೊಂಡು ಬಂದಿದೆ. ಆ ಕಾರಣಕ್ಕಾಗಿಯೇ ದಾಂಡಾಟದ ಕಾನೂನುಗಳನ್ನು **1789 ದಾಂಡಾಟದ ಕಾನೂನು**ಗಳು (1789 Laws of cricket) ಎಂದು ಕರೆಯಲಾಗುತ್ತದೆ. ಇಲ್ಲೊಂದು ವಿಶೇಶವೆಂದರೆ ಜಗತ್ತಿನ ಎಲ್ಲಾ ಬಗೆಯ ಪಯ್ಪೋಟಿಗಳಿಗೆ ಹೋಲಿಸಿದಾಗ, ದಾಂಡಾಟವನ್ನು ಮಾತ್ರ ಕಾನೂನುಗಳಡಿ (Laws) ಆಡಲಾಗುತ್ತದೆ. ಉಳಿದ ಎಲ್ಲಾ ಬಗೆಯೆ ಪಯ್ಪೋಟಿಗಳು ನಿಯಮಾವಳಿಗಳಡಿ (Rules) ಆಡಲಾಗುತ್ತದೆ.

ದಾಂಡಾಟವೆಂಬ ಪಯ್ಪೋಟಿ ಬೆಳಕಿಗೆ ಬಂದದ್ದು ಇಂಗ್ಲೆಂಡ್ ನಾಡಿನಲ್ಲಾದರೂ ಜಗತ್ತಿನ ಹೆಚ್ಚಿನ ನಾಡುಗಳಿಗೆ ಬಹುಬೇಗನೆ ಪಸರಿಸಿಕೊಂಡಿತು. ಇದು ಮೊದಲ ಬಾರಿಗೆ **ಅಮೇರಿಕಾ** ಮತ್ತು **ಕೆನಡಾ** ನಾಡುಗಳ ನಡುವೆ ಪಯ್ಪೋಟಿ ಸಾಗುವ ಮೂಲಕ ದಾಂಡಾಟವು ಇಂಗ್ಲೆಂಡ್ ನಾಡಿನ ಗೆರೆದಾಟಿ, ಜಗತ್ತಿನ ಪಯ್ಪೋಟಿಯಾಗಿ ಮೊದಲ್ಗೊಂಡಿತು. ಈ ಬಳಿಕವೇ 1789 ದಾಂಡಾಟದ

ಕಾನೂನುಗಳು ಕೂಡ ಜಾರಿಗೆ ಬಂದದ್ದು. ಅಲ್ಲದೇ ನಾವೀಗ ಕಾಣುತ್ತಿರುವ ಇಂದಿನ ದಾಂಡಾಟದ ಬದಲಾವಣೆಗಳು ಶುರುವಾದದ್ದು ಇಂಗ್ಲೆಂಡ್ ಮತ್ತು ಪಡುಬಡಗಣ ಅಮೇರಿಕಾದಲ್ಲಿ. ಅದೂ ಕೂಡ ಒಂದೇ ಹೊತ್ತಿನಲ್ಲಿ.

ಅದರಲ್ಲೂ ಅಮೇರಿಕನ್ನರು ತಮ್ಮ ನಾಡಿನಾದ್ಯಂತ ದಾಂಡಾಟಕ್ಕೆ ವ್ಯಾಪಕವಾದ ಬೆಂಬಲ ನೀಡಿ ಬೆಳೆಸ ತೊಡಗಿದರು. ಅಷ್ಟಕ್ಕೂ ಮೊದಲ ಅಂತರಾಷ್ಟ್ರೀಯ ದಾಂಡಾಟದ ಪಯ್ಪೋಟಿ ನಡೆದದ್ದು ಅಮೇರಿಕಾದಲ್ಲಿ. ಈ ಪಯ್ಪೋಟಿ ನಡೆದದ್ದು ಅಮೇರಿಕಾ ಮತ್ತು ಕೆನಡಾ ನಾಡುಗಳ ನಡುವೆ. ಆದರೆ ಇಂದು ದಾಂಡಾಟದಲ್ಲಿ ಮುಂದುವರಿದ ನಾಡುಗಳ ಸಾಲಿನಲ್ಲಿ ಅಮೇರಿಕಾ ಬಹಳಶ್ಟು ಹಿಂದೆ ಉಳಿದಿದೆ. ಒಂದೆಡೆ ದಾಂಡಾಟವನ್ನೇ ಹೋಲುವ, ಅಮೇರಿಕಾ ನಾಡುಗಳಲ್ಲಿ ಸಂಚಲನ ಮೂಡಿಸಿದ ಬೇಸ್ ಬಾಲ್ ಪಯ್ಪೋಟಿಯೂ ಇದಕ್ಕೆ ಕಾರಣವಾಗಿರಬಹುದು.

ಕೆಲ ರಾಜಕೀಯ ಸಮರಗಳ ಹೊತ್ತಿನಲ್ಲಿ, ಅಸ್ಟ್ರೇಲಿಯಾ ತಂಡವು ಇಂಗ್ಲೀಶರ ಎದುರು ದಾಂಡಾಟದ ಸವಾಲೆಸೆದಿತ್ತು. ಅಲ್ಲಿಂದ ಹುಟ್ಟಿದ್ದೇ **'ಆಶಸ್'**ಕೂಟಗಳು. ದಾಂಡಾಟದ ಅತಿ ಹಳೆಯ ಕೂಟ ಎಂದು ಕರೆಸಿಕೊಳ್ಳುವ 'ಆಶಸ್' ನಡೆದದ್ದು, ಅಮೇರಿಕಾ ಮತ್ತು ಕೆನಡಾ ನಾಡುಗಳ ನಡುವೆ ನಡೆದ ಪಯ್ಪೋಟಿಯ ಇಪ್ಪತ್ತಯ್ದು ವರುಶಗಳ ಬಳಿಕ. ಹಾಗಾಗಿ ಅಮೇರಿಕಾ ಮತ್ತು ಕೆನಡಾ ನಡುವಿನ ಪಯ್ಪೋಟಿಯೇ ದಾಂಡಾಟದ ಅತಿ ಹಳೆಯ ಕೂಟ. ಆದರೇ ಇಂದಿನವರೆಗೂ ನಿರಂತರವಾಗಿ ನಡೆದು ಬಂದಿರುವ ಕಾರಣ, ಸಾಂಪ್ರದಾಯಿಕ ಆಶಸ್ ಕೂಟವು ಹಳೆಯ ಕೂಟವಾಗಿ ಗುರುತಿಸಿಕೊಂಡಿದೆಯಶ್ಟೆ.

ಇಂಗ್ಲೆಂಡ್ ನಾಡುಗಳಲ್ಲಿ ಬ್ರಿಟೀಶ್ ಅದಿಕಾರಿಗಳ ನಡುವೆ ಹೆಚ್ಚಾಗಿ ದಾಂಡಾಟದ ಪಯ್ಪೋಟಿಗಳು ಏರ್ಪಡುತ್ತಿದ್ದವು. ಇದರಿಂದ ಪ್ರಶಸ್ತಿ ಸುತ್ತುಗಳು ಕೇವಲ ಪಯ್ಪೋಟಿಗೆ ಸೀಮಿತವಾಗಿರದೆ ಪ್ರತಿಶ್ಟೆಯ ಸುತ್ತುಗಳಾಗಿ ಬದಲಾದವು. ಇದರಿಂದ ಪಯ್ಪೋಟಿಯ ಹೊತ್ತಿನಲ್ಲಿ ಎರೆಡೂ ತಂಡಗಳಿಂದ ಕೆಲವು ರಾಜಕೀಯ ಲಾಬಿಗಳು ಮೊದಲ್ಗೊಂಡವು. ಇದು ದಾಂಡಾಟವನ್ನು ಹೊಸದಾರಿಯತ್ತ ಮುಕ ಮಾಡುವಂತೆ ಮಾಡಿತು.

ಅಲ್ಲಿಂದೀಚೆಗೆ ದಾಂಡಾಟವು ವ್ಯಾಪಾರದ ದಿಕ್ಕಿನತ್ತ ಮುಕ ಮಾಡಿತು. ಇದರ ಹೆಸರಿನಲ್ಲಿ ವ್ಯವಹಾರಗಳು ಪ್ರಾರಂಬವಾದವು. ಇದು ದಾಂಡಾಟದ ಪೋಟಿಗಾರರಿಗೆ ಹಣದ ಹೊಳೆಯನ್ನೇ ಹರಿಸತೊಡಗಿತು. ಇಲ್ಲಿಂದ ದಾಂಡಾಟ ಎಂಬುದು ಮಂದಿಗೆ ಒಂದು ಕೆಲಸದಂತೆ ಗೋಚರಿಸಿತು. ಮುಂದೆ ಇದನ್ನೇ ಕೆಲಸವಾಗಿಸಿಕೊಂಡ ಯುವ ಪೀಳಿಗೆ ದಾಂಡಾಟದ ಪರಿಣಿತಿ ಹೊಂದುತ್ತಾ ಹೋದರು. ಈ ಮಾರ್ಪಾಡು ಮುಂದೆ ಪರಿಣಿತ ತಂಡಗಳ ಹುಟ್ಟಿಗೆ ಕಾರಣವಾಯಿತು.

ನಿಜಕ್ಕೂ ದಾಂಡಾಟವೆಂಬುದು ಮಾರ್ಪಾಡುಗಳ ಪರ್ವವಾಗಿ ನಿಂತದ್ದು ಹತ್ತೊಂಬತ್ತನೇ ನೂರೇಡಿನಲ್ಲಿ. **ಎರಡು ಗೂಟ**ಗಳ (Wickets) ಬಳಕೆಯಿಂದ ಆಡಲಾಗುತ್ತಿದ್ದ ಆಟವು, 1789 ದಾಂಡಾಟದ ಕಾನೂನುಗಳಿಗೆ ಕೆಲವು ಬದಲಾವಣೆಗಳನ್ನು ತರುವ ಮೂಲಕ ಮೂರು ಗೂಟಗಳ ಬಳಕೆಯನ್ನು ಮಾಡಲಾಯಿತು. ಅಲ್ಲದೇ ನಾಲ್ಕು ಎಸೆತಗಳ ಒಂದು **ಎಸೆತಗಟ್ಟಿ**ನಿಂದ (Overs), ಅಯ್ದು ಎಸೆತಗಳ ಒಂದು ಎಸೆತಗಟ್ಟಿಗೆ ಏರಿಸಲಾಯಿತು. ಇಂದು ಆರು ಎಸೆತಗಳ ಒಂದು ಎಸೆತಗಟ್ಟಾಗಿ ಮುಂದುವರೆಯುತ್ತಿದೆ. ದಾಂಡಾಟ ಮೊದಲ್ಗೊಂಡಾಗ ಬಯಲು ಮತ್ತು **ನಡುಹಾಸು** (Pitch) ಕುರಿತು ಹೆಚ್ಚಿನ ಗಮನಹರಿಸಿರಲಿಲ್ಲ. ಬಳಿಕ ಆಟದ ಬಯಲಲ್ಲಿ ಹದವಾಗಿ ಹುಲ್ಲನ್ನು ಬೆಳೆಸುವ ಮೂಲಕ ಸಿದ್ದಗೊಳಿಸುವಂತೆ ನೋಡಿಕೊಳ್ಳಲಾಯಿತು ಮತ್ತು ನಡುಹಾಸನ್ನು **ಚೆಂಡು ಪುಟಿತ**ಗೊಳ್ಳಲು (Bounce) ಸಾದ್ಯವಾಗುವಂತಹ ನಿರ್ದಿಶ್ಟವಾದ ಮಣ್ಣನ್ನು ಬಳಸುವ ಮೂಲಕ ಸಿದ್ದಗೊಳಿಸಲಾಯಿತು.

ಹತ್ತೊಂಬತ್ತನೇ ನೂರೇಡಿನ ಹೊತ್ತಿನಲ್ಲಿ ಇಂಡಿಯಾದಲ್ಲಿ ಬ್ರಿಟೀಶರ ಆಳ್ವಿಕೆಯಿತ್ತು. ಇದರಿಂದ ದಾಂಡಾಟದ ಗಾಳಿ ಇತ್ತಲೂ ಬೀಸಿತ್ತು. ಒಂದರ್ತದಲ್ಲಿ ಹೇಳುವುದಾದರೆ, ಇಂಡಿಯಾ ನಾಡಿನಲ್ಲಿಯೂ ದಾಂಡಾಟ ಹುಟ್ಟುಹಾಕಿದವರು ಇಂಗ್ಲೀಶರೇ. ಅಂದರೆ, **ಬ್ರಿಟೀಶ್ ರಾಣಿ**ಯೇ ಇಂಡಿಯಾದಲ್ಲಿ ಮೊದಲು ದಾಂಡಾಟದ ತಂಡವನ್ನು ಕಟ್ಟಿದ್ದು. ಈ ತಂಡಗಳನ್ನು ಬಳಸಿಕೊಂಡು ಮೊದಮೊದಲು ಕೇವಲ ಮನರಂಜನೆಯ ಬಾಗವಾಗಿ ತಂಡಗಳನ್ನು ಅಣಿಗೊಳಿಸಲಾಯಿತು. ಆ ಹೊತ್ತಿನಲ್ಲಿ ಬ್ರಿಟೀಶ್ ಅದಿಕಾರಿಗಳು ಮತ್ತು ಇಂಡಿಯಾ ತಂಡಗಳ ನಡುವೆ ಮನರಂಜನಾ ಪೋಟಿಗಳು ನಡೆಯುತ್ತಿದ್ದವು. ಮುಂದೆ ದಾಂಡಾಟದ ಪ್ರಚಂಡ ಬೆಳವಣಿಗೆಯ

ಕಾರಣದಿಂದಾಗಿ ಇಂಡಿಯಾದಲ್ಲಿಯೂ ಪರಿಣಿತ ಪೋಟಿಗಾರರ ಸೇರುವಿಕೆಯಲ್ಲಿ ಅಂತರಾಶ್ತ್ರೀಯ ಮಟ್ಟದ ತಂಡಗಳು ರೂಪುಗೊಂಡವು.

ಸುಮಾರು ಇಪ್ಪತ್ತನೇ ನೂರೇಡಿನವರೆಗೂ ಒಂದು ಹಂತವಾಗಿ ನಡೆದು ಬಂದಿದ್ದ ದಾಂಡಾಟವು ಅಲ್ಲಿಂದೀಚೆಗೆ ಹೊಸದಾದ ಬದಲಾವಣೆಗಳನ್ನು ಕಂಡುಕೊಂಡಿತು. ಹತ್ತೊಂಬತ್ತನೇ ನೂರೇಡಿನಲ್ಲಿ ಹುಟ್ಟಿಕೊಂಡ **ಕಾಮನ್‌ವೆಲ್ತ್** ಕೂಟಗಳು ದಾಂಡಾಟದ ನಾಗಾಲೋಟಕ್ಕೆ ಅಡ್ಡಗಾಲಿಟ್ಟಿತು. ಆಗ ಅಂತರಾಶ್ತ್ರೀಯ ಮಟ್ಟದಲ್ಲಿ ಕೆಲವೇ ಕೆಲವು ಪ್ರಮುಕ ತಂಡಗಳು ಮಾನ್ಯತೆ ಪಡೆದುಕೊಂಡಿದ್ದವು, ಬಳಿಕ ಬೇರೆ ನಾಡುಗಳ ಇನ್ನಶ್ಟು ಹೊಸ ತಂಡಗಳನ್ನು ಅಂತರಾಶ್ತ್ರೀಯ ಮಟ್ಟದ ದಾಂಡಾಟದ ಅಂಗಣಕ್ಕೆ ದಾರಿಮಾಡಿಕೊಂಡವು. ಅಂದರೆ ಈ ಹೊಸ ತಂಡಗಳ ಕೂಡುವಿಕೆಯಲ್ಲಿ ದಾಂಡಾಟದ 'ವಿಶ್ವಕಪ್' ಕೂಟಗಳ ಆಯೋಜನೆಗೆ ಪ್ರೇರೇಪಿಸಿತು. ಇಲ್ಲಿಂದ ದಾಂಡಾಟದ ಮತ್ತೊಂದು ವಯ್ಬವ ಮೊದಲ್ಗೊಂಡಿತು.

***(ಚಿತ್ರಸೆಲೆ:** sportskeeda.com)*

# ಕ್ರಿಕೆಟ್ ಎಸೆತಗಾರಿಕೆಯ ಗುಟ್ಟು




**ದಾಂಡಾಟದ** (Cricket) ಪೋಟಿಯಲ್ಲಿ **ಎಸೆತಗಾರಿಕೆಯು** (Bowling), ಒಬ್ಬ **ಎಸೆತಗಾರನು** (Bowler) ತನ್ನ **ಓಡುಗೆಯಿಂದ** (Run up) ಚೆಂಡಿನ **ತುದಿಬಿಡುಗೆಯ** (Point of release) ತನಕ ಮಾಡುವ ಬೇರೆ ಬೇರೆ ಚಲನೆಯ ಪಲಿತಾಂಶವಾಗಿರುತ್ತದೆ. ಸಾಮಾನ್ಯವಾಗಿ ಕಯ್ ತಿರುಗಿಸಿ ಎಸೆತ ಎಸೆದರೆ ಸಾಕು ಎನ್ನುವುದು ನಮ್ಮ ಅಬಿಪ್ರಾಯ. ಆದರೆ ಅದು ತಪ್ಪು. ದಾಂಡಾಟದಲ್ಲಿ ಪ್ರತಿಯೊಂದಕ್ಕೂ ಒಂದು ನಿಯಮವಿದೆ, ಅಂತೆಯೇ ಎಸೆತಗಾರಿಕೆಗೂ ಕೂಡ. ಎಸೆತಗಾರನೊಬ್ಬ ಎಸೆಯುವ ಪ್ರತಿ ಎಸೆತವು ನಿಯಮ ಬದ್ದವಾಗಿರಬೇಕು ಎಂದು ಅಯ್.ಸಿ.ಸಿ ನಿಯಮಾವಳಿಗಳು ಹೇಳುತ್ತವೆ. ಅದರಂತೆ ಪ್ರತಿಯೊಬ್ಬ ಎಸೆತಗಾರನೂ ಅವನದೇ ಆದ ರೀತಿಯಲ್ಲಿ ಎಸೆತಗಾರಿಕೆಯನ್ನು ನಡೆಸುವ ಅವಕಾಶವನ್ನು ಅಯ್.ಸಿ.ಸಿ ನೀಡಿದೆ. ಆದರೆ ಎಸೆತಗಾರಿಕೆಯ ರೀತಿಯು ಅಯ್.ಸಿ.ಸಿ ನಿಯಮಾವಳಿಗೆ ಒಳಪಟ್ಟಿರಬೇಕಶ್ಟೆ.

ಸಾಮಾನ್ಯವಾಗಿ ಎಸೆತಗಾರಿಕೆಯಲ್ಲಿ ಮುಕ್ಯವಾಗಿ ಮೂರು ಬಗೆಗಳಿರುತ್ತವೆ ಅವು ವೇಗದ ಎಸೆತ, ನಡುವೇಗದ ಎಸೆತ ಮತ್ತು ತಿರುಗೆಸೆತ. ಈ ಮೂರು ರೀತಿಯ ಎಸೆತಗಾರಿಕೆಯೂ ಆ ಎಸೆತಗಾರನ ಓಡುಗೆಯನ್ನು ಆದರಿಸಿರುತ್ತದೆ. ಆದರೆ ವೇಗದ ಎಸೆತ (Fast bowling) ಮತ್ತು ನಡುವೇಗದ ಎಸೆತಗಳ (Medium pace bowling) ಎಸೆತಗಾರಿಕೆಯ ಬಗೆಗಳು ಹೆಚ್ಚಾಗಿ ಹೋಲುತ್ತವೆ. ಇನ್ನುಳಿದಂತೆ ತಿರುಗೆಸೆತ (Spin bowling)ವು ಬೇರೆಯದೇ ಆದ ಎಸೆತಗಾರಿಕೆಯ ಬಗೆಯನ್ನು ಹೊಂದಿರುತ್ತದೆ.


**ಎಸೆತಗಾರಿಕೆಯ ಬಗೆಗಳು:**

ಸಾಮಾನ್ಯವಾಗಿ ಗಟ್ಟಿ ಚರ್ಮಗಳಿಂದ ಮಾಡಲ್ಪಡುವ ಡಾಂಡಾಟದ ಚೆಂಡನ್ನು ಆದಶ್ಟು ವೇಗವಾಗಿ ಎಸೆಯುವುದು, ಪಿಚ್‌ಗೆ ಚೆಂಡು ತಾಕಿದೊಡನೆ ನಿಯಮಿತ ರೀತಿಯಲ್ಲಿ ಪುಟಿಯುವಂತೆ ಮಾಡುವುದು, ಅತವಾ ಗಾಳಿಯ ನೆರವನ್ನು ಪಡೆದು ತೇಲೆಸೆತಗಳನ್ನು ಎಸೆಯುವುದು ವೇಗದ ಎಸೆತಗಾರಿಕೆಯ ಮುಕ್ಯ ಗುರಿಯಾಗಿದೆ.

- ನಿಯಮಿತವಾಗಿ ಗಂಟೆಗೆ 146 ಕಿಲೋ ಮೀಟರ್ ಮತ್ತು ಅದಕ್ಕೂ ಹೆಚ್ಚಿನ ವೇಗದಲ್ಲಿ ದಾಂಡುಗಾರನತ್ತ ತೂರಿಬರುವ ಎಸೆತಗಳನ್ನು ವೇಗದ ಎಸೆತಗಳ ಗುಂಪಿಗೆ ಸೇರಿಸಿಲಾಗಿದೆ
- ಗಂಟೆಗೆ 145 ಕಿ.ಮೀ ಮತ್ತು ಅದಕ್ಕಿಂತ ಕಡಿಮೆ ವೇಗದ ಎಸೆತಗಳನ್ನು ನಡುವೇಗದ ಎಸೆತಗಳೆನ್ನುವರು

ಪಾಕಿಸ್ತಾನದ ಎಸೆತಗಾರ **ಶೋಯಬ್ ಅಕ್ತರ್** ಇಂಗ್ಲೆಂಡ್ ವಿರುದ್ದದ ಪಯ್ಪೋಟಿಯಲ್ಲಿ 161.3 ಕಿ.ಮೀ ವೇಗದಲ್ಲಿ ಎಸೆದ ಚೆಂಡು, ಅದಿಕ್ರುತವಾಗಿ ಈ ವರೆಗಿನ ದಾಂಡಾಟದ ಅತೀ ವೇಗದ ಎಸೆತವಾಗಿದೆ.

ವೇಗದ ಎಸೆತಗಳು ಕೇವಲ ಎಸೆತಗಾರರನ್ನಷ್ಟೇ ಆದರಿಸದೇ, ಪಿಚ್‌ನ ಗುಣ ಮತ್ತು ಗಾಳಿಪಾಡನ್ನೂ ಅವಲಂಬಿಸಿರುತ್ತದೆ. ಸಾಮಾನ್ಯವಾಗಿ ಇಂಡಿಯಾ, ಶ್ರೀಲಂಕಾದಂತಹ ಉಪಕಂಡಗಳಲ್ಲಿ ವೇಗದ ಎಸೆತಗಳು ಅಷ್ಟು ಪರಿಣಾಮಕಾರಿ ಎಂದೆನಿಸುವುದಿಲ್ಲ. ಕಾರಣ ಇಲ್ಲಿನ ಪಿಚ್‌ಗಳು ಮತ್ತು ಗಾಳಿಪಾಡುಗಳು ವೇಗದ ಎಸೆತಕ್ಕೆ ಅಶ್ಟಾಗಿ ನೆರವಾಗುವುದಿಲ್ಲ. ಆದರೆ ಆಸ್ಟ್ರೇಲಿಯಾ, ಇಂಗ್ಲೆಂಡ್ ನಂತಹ ಗಾಳಿಪಾಡು ಮತ್ತು ಪಿಚ್‌ನ ಸ್ತಿತಿ ವೇಗದ ಎಸೆತಗಾರಿಕೆಗೆ ಹೇಳಿ ಮಾಡಿಸಿದಂತಹುದು. ಒಂದಶ್ಟು ದೂರದಿಂದ ಓಡಿಬಂದು ತನ್ನ ಬಲವನ್ನೆಲ್ಲಾ ಬಳಸಿ ಎಸೆತಕ್ಕೆ ವೇಗ ನೀಡುವುದೆಂದರೆ ಅಶ್ಟು ಸುಲಬದ ಮಾತಲ್ಲ. ಅದಕ್ಕೆ ಅದರದ್ದೇ ಆದ ಚಳಕ, ಚಟುವಟಿಕೆ, ಜಾಣತನ ಮತ್ತು ಅನುಸರಿಸುವ ನಿಯಮಗಳಲ್ಲಿ ಪಕ್ವತೆಯ ಅವಶ್ಯಕತೆಯಿದೆ.



*ಚೆಂಡಿನ ಹಿಡಿತ*

**ಎಸೆತಗಾರಿಕೆಯ ಚಟುವಟಿಕೆಗಳು:**

ಎಸೆತಗಾರನು ತಾನು ಎಸೆತ ಎಸೆಯುವುದಕ್ಕೂ ಮುನ್ನ ಚೆಂಡನ್ನು ಸರಿಯಾಗಿ ಹಿಡಿದುಕೊಳ್ಳುವ ಮೂಲಕ ಚೆಂಡಿನ ಮೇಲೆ ಹಿಡಿತ ಸಾದಿಸುವುದು ಅತಿ ಮುಕ್ಯವಾದ ಕೆಲಸವಾಗಿದೆ. ಏಕೆಂದರೆ ಎಸೆತಗಾರನು ಹೆಚ್ಚಿನ ವೇಗವನ್ನು ಪಡೆದುಕೊಳ್ಳುವಲ್ಲಿ ಚೆಂಡಿನ ಹಿಡಿತವು ಹೆಚ್ಚಿನ ಪಾತ್ರ ವಹಿಸುತ್ತದೆ. ಚೆಂಡಿನ **ಹೊಲಿಗೆಯ ನಡುಗೆರೆ**(Seam)ಗೆ ನೇರವಾಗುವಂತೆ ಚೆಂಡನ್ನು ಹಿಡಿದುಕೊಂಡು, ನಡುಗೆರೆಗೆ ಹತ್ತಿರವಿರುವಂತೆ ತೋರುಬೆರಳು ಮತ್ತು ಮದ್ಯದ ಬೆರಳನ್ನು ಇರಿಸಿಕೊಂಡು, ಹೆಬ್ಬೆರಳನ್ನು ಚೆಂಡಿನ ಕೆಳಬಾಗದಲ್ಲಿ ಸರಿಯಾಗಿ ನಡುಗೆರೆಗೆ ಹಿಡಿದುಕೊಳ್ಳಬೇಕು ಮತ್ತು ಚೆಂಡು ಕಯ್ಯಿಂದ ಸುಲಬವಾಗಿ ಜಾರಿಹೋಗುವಂತಿರಬೇಕು. ಇದು ಸಾಮಾನ್ಯವಾಗಿ ಎಸೆತಗಾರನು ಚೆಂಡಿನ ಮೇಲೆ ಹಿಡಿತ ಸಾದಿಸುವ ಬಗೆ.

ಇದಲ್ಲದೇ ಎಸೆತಗಾರನು ಇತರ ಬೇರೆ ರೀತಿಯ ಹಿಡಿತಗಳನ್ನು ಕೂಡ ಸಾದಿಸುತ್ತಾನೆ. ಇದರಿಂದ ಹಲವು ತರದ ಚೆಂಡೆಸೆತವನ್ನು ಕಾಣಬಹುದಾಗಿದೆ. ಎಸೆತಗಾರನು ಎಸೆತ ಎಸೆಯುವ ಮುನ್ನ ಇಂತಿಶ್ಟು ದೂರದಿಂದ ಓಡಿ ಬಂದು ತನ್ನ ಎಸೆತಗಾರಿಕೆಯ ಮೇಲೆ ಹಿಡಿತ ಸಾದಿಸುವುದನ್ನು ಓಡುಗೆ ಎನ್ನುವರು. ಆದರೆ ವೇಗದ ಎಸೆತಗಾರ, ನಡುವೇಗದ ಎಸೆತಗಾರ ಮತ್ತು ತಿರುಗಿಸುಗನ ಓಡುಗೆಯಲ್ಲಿ ಬಹಳಶ್ಟು ವ್ಯತ್ಯಾಸಗಳಿವೆ.

ವೇಗದ ಎಸೆತಗಾರನು ತನ್ನ ಎಸೆತಕ್ಕೆ ಸರಿಯಾದ ರಬಸ ಮತ್ತು ಗತಿ ನೀಡುವ ಸಲುವಾಗಿ ಓಡುಗೆಯನ್ನು ಗಡಿರೇಕೆಯಿಂದ ದೂರವಾಗಿ ಶುರುವಿಟ್ಟರೆ, ನಡುವೇಗದ ಎಸೆತಗಾರನು ಗಡಿರೇಕೆಗೆ ತುಸು ದೂರದಲ್ಲಿ ಓಡುಗೆಯನ್ನು ಪ್ರಾರಂಬಿಸುತ್ತಾನೆ. ಹಾಗೆಯೇ ತಿರುಗಿಸುಗನು ಗಡಿರೇಕೆಗೆ ಹತ್ತಿರವಾಗಿ ಓಡುಗೆಯನ್ನು ಮಾಡುತ್ತಾನೆ. ಬಹುತೇಕ ವೇಗದ ಎಸೆತಗಾರರು ವೇಗ, ನಡು ವೇಗ, ಕಡುವೇಗದಂತಹ ಮಿಶ್ರಣದ ಎಸೆತಗಳನ್ನು ಎಸೆಯುತ್ತಾರೆ. ಆದರೆ ವೇಗದ ಎಸೆತ ಮತ್ತು ನಡುವೇಗದ ಎಸೆತಗಳ ಎಸೆತಗಾರಿಕೆಯ ರೀತಿಯು ಸಾಮಾನ್ಯವಾಗಿ ಒಂದೇ ಆಗಿರುವುದರಿಂದ, ಎಸೆತಗಾರರ ಚಟುವಟಿಕೆಯೂ ಹೆಚ್ಚಾಗಿ ಹೋಲುತ್ತದೆ. ಹೀಗೆ ಓಡುಗೆಯಲ್ಲಿ ಏನೇ ಬದಲಾವಣೆಗಳನ್ನು ಮಾಡಿಕೊಂಡರೂ ಎಸೆತಗಾರಿಕೆಯ ನಿಯಮಗಳು ಎಲ್ಲರಿಗೂ ಒಂದೇ ಆಗಿರುತ್ತದೆ.




*ಎದೆಮುಂದು*



*ಎದೆಬದಿಗೆ*

ಓಡುಗೆಯ ಕೊನೆಯಲ್ಲಿ ಎಸೆತಗಾರನು**ಎದೆಮುಂದು** (Chest on) ಅತವಾ**ಎದೆಬದಿಗೆ** (Side on) ಎಂಬ ಕ್ರಿಯೆಗೆ ಒಳಗಾಗುತ್ತಾನೆ. ಎದೆಮುಂದಿನ ಬಗೆಯಲ್ಲಿ ಎಸೆತಗಾರನು ಚೆಂಡನ್ನು ಎಸೆಯುವ ತುಸು ಹೊತ್ತಿಗೂ ಮೊದಲು ತನ್ನ ಹಿಂದಿನ ಕಾಲನ್ನು ನೆಲದ ಮೇಲಿಟ್ಟು, ಆತನ ಎದೆ ಮತ್ತು ಸೊಂಟದ ಬಾಗಗಳನ್ನು ದಾಂಡುಗಾರನೆಡೆಗೆ ಸರಿಹೊಂದುವಂತೆ ತಿರುಗಿಸಿಕೊಳ್ಳುತ್ತಾನೆ. ಎದೆಬದಿಗೆಯಲ್ಲಿ ಎಸೆತಗಾರನು ಹಿಂದಿನ ಕಾಲನ್ನು ನೆಲಕ್ಕೆ ಇಟ್ಟ ಕೂಡಲೆ ಆತನ ಎದೆ ಮತ್ತು ಸೊಂಟವನ್ನು ದಾಂಡುಗಾರನಿಗೆ ತೊಂಬತ್ತು ಡಿಗ್ರಿಯಲ್ಲಿರುವಂತೆ ತಿರುಗಿಸಿಕೊಂಡು ತನ್ನ ಮಂಡಿಯನ್ನು ಆದಶ್ಟು ನೇರವಾಗಿಸುವುದರೊಂದಿಗೆ ಮುಂದಿನ ಕಾಲನ್ನು ಗಡಿರೇಕೆಯ ಬಳಿತಂದು ಚೆಂಡನ್ನು ಬಿಡುತ್ತಾನೆ. ಇದು ಎಸೆತದ ವೇಗವನ್ನು ಹೆಚ್ಚಿಸಲು ನೆರವಾಗುತ್ತದೆ.

ವಿಶೇಶವೆಂದರೆ, ಚೆಂಡಿನ ತುದಿಬಿಡುಗೆ ಮಾಡಲು ಬಲಗಯ್ ಎಸೆತಗಾರರು ತಮ್ಮ ಎಡಗಾಲನ್ನು ಮುಂಕಾಲೂರಿಕೆಯಾಗಿ ಮತ್ತು ಬಲಗಾಲನ್ನು ಹಿಂಕಾಲೂರಿಕೆಯಾಗಿ ಬಳಸಿಕೊಂಡರೆ, ಎಡಗಯ್ ಎಸೆತಗಾರರು ತಮ್ಮ ಬಲಗಾಲನ್ನು ಮುಂಕಾಲೂರಿಕೆಯಾಗಿ ಮತ್ತು ಎಡಗಾಲನ್ನು ಹಿಂಕಾಲೂರಿಕೆಯಾಗಿ ಬಳಸಿಕೊಳ್ಳುತ್ತಾರೆ. ಬಳಿಕ ಎಸೆತಗಾರನು ಎಸೆತ ಎಸೆಯಲು ಬಳಸುವ ಕಯ್ಯನ್ನು ಅವರ ತಲೆಯ ಮೇಲೆ ತಂದು, ತಾನು ಪಿಚ್ ಮೇಲೆ ಚೆಂಡನ್ನು ಪುಟಿಸಲು ಬಯಸುವ ಕಡೆ ಎಸೆಯುತ್ತಾನೆ.

ಎಸೆತಗಾರಿಕೆಯ ಹೊತ್ತಲ್ಲಿ ತನ್ನ ಮೊಣಕೈಯನ್ನು ಬಗ್ಗಿಸಿ ಚೆಂಡನ್ನು ಎಸೆಯುವುದರಿಂದ ದಾಂಡುಗಾರ ಅತವಾ ಹುತ್ತರಿಯನ್ನು ಗುರಿಯಾಗಿಸಿಕೊಳ್ಳಲು ಸಹಾಯಕವಾಗುತ್ತದೆ. ಚೆಂಡನ್ನು ಎಸೆದ ಬಳಿಕ ಎಸೆತಗಾರನು **ಹಿಂಬಾಲಿಕೆ**ಯಲ್ಲಿ (Follow through) ಮುಂದುವರಿಯುತ್ತಾನೆ. ಇವುಗಳಲ್ಲಿ ಪಿಚ್‌ನ ಮೇಲೆ ಹೆಜ್ಜೆಗಳನ್ನಿರಿಸದಂತೆ ಪಿಚ್‌ನ ಪಕ್ಕಕ್ಕೆ ಹೋಗುವುದು ಮತ್ತು ಜೊತೆ ಜೊತೆಗೆ ತನ್ನ ವೇಗವನ್ನು ಕುಗ್ಗಿಸಿಕೊಳ್ಳಲು ಇನ್ನು ಕೆಲವು ಹೆಜ್ಜೆಗಳನ್ನು ತೆಗೆದು ಕೊಳ್ಳುವುದು ಮತ್ತು ದಾಂಡುಗಾರನ ಹೊಡೆತಗಳತ್ತ ಗಮನಹರಿಸುವುದೂ ಆಗಿದೆ.

ಜಗತ್ತಿನಾದ್ಯಂತ ಎಲ್ಲಾ ದಾಂಡಾಟದ ತಂಡಗಳು ಬೇರೆಯದೇ ಆದ ವೇಗ ಮತ್ತು ಎಸೆತಗಾರಿಕೆಯ ಬಗೆಯನ್ನು ಹೊಂದಿರುವ ಎಸೆತಗಾರರನ್ನು ಹೊಂದಿದೆ. ಆದರೂ ನಿಕರವಾದ ಎಸೆತಗಾರಿಕೆಯ ಚಳಕಗಳನ್ನು ಪೋಟಿಯ ಗತಿ, ಪಿಚ್‌ನ ಸ್ತಿತಿ, ಗಾಳಿಪಾಡು, ಎಸೆತಗಾರರ ಜಾಣ್ಮೆ ಸೇರಿದಂತೆ ಅನೇಕ ಅಂಶಗಳಿಂದ ನಿರ್ದರಿಸಲಾಗುತ್ತದೆ. ಸಾಮಾನ್ಯವಾಗಿ ಎಸೆತಗಾರಿಕೆಗೆ ಹೆಚ್ಚಿನ ಶಕ್ತಿಯ ಅಗತ್ಯವಿರುತ್ತದೆ.

ಪೋಟಿಯ ಸ್ತಿತಿಯ ಆದಾರದ ಮೇಲೆ ಕೆಲವೊಮ್ಮೆ ಒಳ್ಳೆಯ ಎಸೆತಗಾರನಿಂದ ಒಂದರ ಹಿಂದೊಂದರಂತೆ ನಾಲ್ಕು-ಅಯ್ದು**ಎಸೆತಗಟ್ಟು**ಗಳನ್ನು (Over) ತಂಡದ ನಾಯಕ ಎದುರು ನೋಡುತ್ತಾನೆ. ಈ ಕಾರಣದಿಂದ ಪೋಟಿ ಸಾಗಿದಂತೆ ಕೊನೆಯ ಸುತ್ತುಗಳ ಎಸೆತಗಟ್ಟುಗಳನ್ನು ನಿಕರವಾದ ಜಾಗದಲ್ಲಿ ಮತ್ತು ಕ್ರಮಗಳಲ್ಲಿ ಪರಿಣಾಮಕಾರಿಯಾಗಿ ನಡೆಸಲು ಎಸೆತಗಾರನಿಗೆ ಕಶ್ಟವಾಗಬಹುದು. ಇಂತಹ ಹೊತ್ತಲ್ಲಿ ಎಸೆತಗಾರಿಕೆಯ ಚಳಕಗಳು ಎಸೆತಗಾರನಿಗೆ ಕಗ್ಗಂಟಾಗಿಯೇ ಉಳಿಯುತ್ತದೆ.

***(ಮಾಹಿತಿ ಮತ್ತು ಚಿತ್ರ ಸೆಲೆ:*** *bbc.co, wikipedia)*

# ಎಸೆತದೆಣಿಕೆಯ ಎಡವಟ್ಟು



ಕಾಲದ ಗಾಲಿಗೆ ಸಿಕ್ಕು ವೇಗವಾಗಿ ಓಡುತ್ತಿರುವ ಹೊತ್ತಿಲ್ಲದ ನಮ್ಮ ಬದುಕಲ್ಲಿ ಎಡವಟ್ಟುಗಳು ಬಲು ಸಹಜ. ಒಮ್ಮೊಮ್ಮೆ ನಾವು ಅಂದುಕೊಳ್ಳದ ರೀತಿಯಲ್ಲಿ ನಮ್ಮ ಕೆಲವು ವಿಚಿತ್ರ ಎಡವಟ್ಟುಗಳು ನಗೆ ತರಿಸಿದರೆ, ಮತ್ತೆ ಕೆಲವು ಪರಿಣಾಮಕಾರಿಯಾಗಿ ಬದಲಾಗುವುದೂ ಉಂಟು. ಆದರೆ ಇನ್ಯಾರೋ ಮಾಡಿದ ಎಡವಟ್ಟಿಗೆ ಮತ್ತಿನ್ಯಾರೋ ಬಲಿಯಾದರೆ ಹೇಗಾಗಬಹುದು ಹೇಳಿ ? **ದಾಂಡಾಟ**ದಲ್ಲಾದ (Cricket) ಅಂತಹದ್ದೇ ಒಂದು ಎಡವಟ್ಟಿನ ಬಗ್ಗೆ ತಿಳಿದುಕೊಳ್ಳೋಣ ಬನ್ನಿ.

2012 ಪೆಬ್ರವರಿ 14 ರಂದು **ಇಂಡಿಯಾ** ಮತ್ತು **ಶ್ರೀಲಂಕಾ** ನಡುವೆ 50 **ಎಸೆತಗಟ್ಟು**ಗಳ (Overs) ಒಂದು ದಾಂಡಾಟ ನಡೆದಿತ್ತು. ಆಸ್ಟ್ರೇಲಿಯಾದ **ಅಡಿಲೇಡ್** ಬಯಲಿನಲ್ಲಿ ಸಾಗಿದ ಈ ಪಯ್ಪೋಟಿಯಲ್ಲಿ ತೀರ್ಪುಗಾರ (Umpire) ಮಾಡಿದ ಒಂದು ಸಣ್ಣ ಎಡವಟ್ಟು, ಆಟದ ಪಲಿತಾಂಶವನ್ನೇ ಬದಲಿಸಿದ್ದು ವಿಪರ್ಯಾಸವೇ ಸರಿ. ಮೊದಲು **ದಾಂಡುಗಾರಿಕೆ** (Batting) ಮಾಡಿದ ಶ್ರೀಲಂಕಾ ತಂಡ ಜಯವರ್ದನೆ ಹಾಗೂ ಚಂಡಿಮಾಲ್ ಉತ್ತಮ ದಾಂಡುಗಾರಿಕೆಯ ಸಹಾಯದಿಂದ ನಿಗದಿತ 50 ಎಸೆತಗಟ್ಟುಗಳಲ್ಲಿ 9 **ಹುದ್ದರಿ**ಗಳನ್ನು (Wicket) ಕಳೆದುಕೊಂಡು 236 **ಓಟ**ಗಳನ್ನು (Runs) ಗಳಿಸಿತು. ಇದಕ್ಕುತ್ತರವಾಗಿ ದಾಂಡುಗಾರಿಕೆ ಆರಂಬಿಸಿದ ಇಂಡಿಯಾ ಪಾಳಯವು, ಆರಂಬದ ಕೆಲವು ಆಗಾತಗಳಿಂದ ಚೇತರಿಸಿಕೊಳ್ಳುತ್ತ ನಿದಾನವಾಗಿ ಗುರಿಯೆಡೆಗೆ ಸಾಗುತ್ತಿತ್ತು. ಇಂಡಿಯಾದ ಪರ 91 ಓಟಗಳನ್ನು ಗಳಿಸಿದ ಗಂಬೀರ್, 41ನೇ ಎಸೆತಗಟ್ಟಿನಲ್ಲಿ ತನ್ನ ಹುದ್ದರಿ ಕಳೆದುಕೊಳ್ಳುವಶ್ಟರಲ್ಲಿ ಇಂಡಿಯಾದ ಮೊತ್ತ 5 ಹುದ್ದರಿ ನಶ್ಟಕ್ಕೆ 178. ಬಳಿಕ ಬಂದ ಜಡೇಜಾ ಮತ್ತು ಅಶ್ವಿನ್ ಜೊತೆಸೇರಿಸಿಕೊಂಡ ನಾಯಕ ದೋನಿ ಗುರಿ ಬೆನ್ನಟ್ಟುವುದನ್ನು ಮುಂದುವರೆಸಿದ್ದರು. ಓಟ ಗಳಿಕೆಯಲ್ಲಿ ಏರಿಳಿತ, ನಡು ನಡುವೆ ಹುದ್ದರಿಯ ಕಳೆತ ಹೀಗೆ ಹೊತ್ತು ಕಳೆದಂತೆ, ಆಟ ಸಾಗಿದಂತೆ ನೋಡುಗರಿಗೆ ಕುತೂಹಲವನ್ನೂ ಬರಮಾಡುತ್ತಿತ್ತು.

ಕೊನೆಯ ಎಸೆತಗಟ್ಟಿನ ಆರು ಎಸೆತಗಳಲ್ಲಿ ಇಂಡಿಯಾಕ್ಕೆ ಗೆಲ್ಲಲು ಒಂಬತ್ತು ಓಟಗಳ ಅವಶ್ಯಕತೆಯಿತ್ತು.ಇಂಡಿಯಾದ ಕಯ್ಯಲ್ಲಿದ್ದದ್ದು 2 ಹುದ್ದರಿ ಮಾತ್ರ. ಒಂದು ಬದಿಯಲ್ಲಿ ಎಸೆತಗಾರಿಕೆ ನಡೆಸಲು ಲಸಿಂತ್ ಮಾಲಿಂಗ ತಯಾರಿ ನಡೆಸಿದರೆ, ಇನ್ನೊಂದು ಬದಿಯಲ್ಲಿ ಎಸೆತಗಾರಿಕೆ ಎದುರಿಸಲು ದೋನಿ ಸಜ್ಜಾಗಿದ್ದರು. ಜೊತೆಗೆ ಈ ಕೊನೆಯ ಎಸೆತಗಟ್ಟು ಹೆಚ್ಚಿನ ವಿಶೇಶತೆ ಪಡೆದುಕೊಂಡಿತ್ತು. ಕಾರಣ ಈಗಿನ ದಾಂಡಾಟದಲ್ಲಿ (Modern Cricket) ಕೊನೆಯ ಸರದಿಯ ಎಸೆತಗಟ್ಟುಗಳನ್ನು ಎದುರಿಸುವಲ್ಲಿ ದೋನಿ ಜಗತ್ತು ಕಂಡ ಅತಿ ಉತ್ತಮ ದಾಂಡುಗಾರರಲ್ಲಿ ಒಬ್ಬರು. ಹಾಗೆಯೇ ದಾಂಡಾಟದ ಕೊನೆಯ

ಸರದಿಯ ಎಸೆತಗಟ್ಟುಗಳನ್ನು ಎಸೆಯುವಲ್ಲಿ ಮಾಲಿಂಗ ಜಗತ್ತು ಕಂಡ ಅತಿ ಉತ್ತಮ ಎಸೆತಗಾರರಲ್ಲಿ ಒಬ್ಬರು. ಹೀಗಿರುವಾಗ ಈ ಎರಡು ಉತ್ತಮ ಆಟಗಾರರ ಮುಕಾಮುಕಿಗೆ ಅಡಿಲೇಡ್ ಬಯಲು ಅಣಿಯಾಗಿತ್ತು.

ಮಾಲಿಂಗ ಎಸೆದ ಕೊನೆಯ ಎಸೆತಗಟ್ಟಿನ ಮೊದಲ ಎರಡು ಎಸೆತಗಳಲ್ಲಿ, ದೋನಿ ಕ್ರಮವಾಗಿ **ಜಂಟಿ ಓಟ** (Double run), ಮತ್ತು **ಒಂಟಿ ಓಟ** (Single run) ಗಳಿಸಿದರು. ಮೂರನೆ ಹಾಗೂ ನಾಲ್ಕನೇ ಎಸೆತದಲ್ಲಿ ವಿನಯ್ ಕುಮಾರ್ ಮತ್ತು ದೋನಿ ಕ್ರಮವಾಗಿ ಒಂಟಿ ಓಟಗಳನ್ನು ಗಳಿಸಿದರು. ಆದರೆ ಅಯ್ದನೇ ಎಸೆತದಲ್ಲಿ ವಿನಯ್ ಕುಮಾರ್ **ಹುತ್ತರಿಕಳೆತ**ದ (Out) ಮೂಲಕ ಇಂಡಿಯಾಕ್ಕೆ ಗೆಲ್ಲಲು ಕೊನೆಯ ಎಸೆತದಲ್ಲಿ 4 ಓಟಗಳ ಅವಶ್ಯಕತೆ ಇತ್ತು. ಆ ಎಸೆತಕ್ಕೆ **ಎದುರಿಸುಗ**ನಾಗಿ (Striker) ದೋನಿ ನಿಂತಿದ್ದರಿಂತ ಇಂಡಿಯಾದ ಪಾಳಯದಲ್ಲಿ ಆಟ ಗೆಲ್ಲುವ ಬರವಸೆ ಎಶ್ಟಿತ್ತೋ ಅಶ್ಟೇ ಬಯವೂ ಇತ್ತು. ಏಕೆಂದರೆ ಎಸೆತಗಾರಿಕೆಗೆ ಚೆಂಡು ಇದ್ದದ್ದೂ ಮತ್ತದೇ ಮಾಲಿಂಗಾ ಕಯ್ಯಲ್ಲಿ. ನೋಡುಗರ ಹತ್ತು ಹಲವು ಲೆಕ್ಕಾಚಾರಗಳ ನಡುವೆ ತನ್ನದೇ ಆದ ಲೆಕ್ಕಾಚಾರದಲ್ಲಿ ಮಾಲಿಂಗ ಕೊನೆಯ ಎಸೆತ ಎಸೆದೇಬಿಟ್ಟರು. ಆದರೇ ದೋನಿ ಚೆಂಡನ್ನು **ಬಲಬದಿ ಎಲ್ಲೆ**ಯ (Off side boundary) ಕಡೆ ಜೋರಾಗಿ ಬಾರಿಸುವ ಮೂಲಕ ಮೂರು ಓಟಗಳನ್ನು ಗಳಿಸಲು ಮಾತ್ರ ಸಾದ್ಯವಾಯಿತು. ಆದ್ದರಿಂದ ಇಂಡಿಯಾ 50 ಎಸೆತಗಟ್ಟಿನಲ್ಲಿ 9 ಹುದ್ದರಿ ಕಳೆದುಕೊಂಡು 236 ಓಟ ಗಳಿಸಲಶ್ಟೇ ಶಕ್ತವಾಯಿತು. ಆ ಮೂಲಕ ತೀವ್ರ ಕವ್ತುಕದ ಒಂದು ಆಟ**ಸಮಬಲ**ದ (Tie) ಮೂಲಕ ಮುಕ್ತಾಯ ಗೊಂಡಿತು. ಹೊತ್ತಿಗನುಸಾರವಾಗಿ ಇತ್ತಂಡಗಳ ಮೇಲಾಟದಿಂದ ಸಾಗುತ್ತಾ ಸಾಗುತ್ತಾ ಕೊನೆ ಎಸೆತಗಟ್ಟಿನ ಕೊನೆಯ ಎಸೆತದ ವರೆಗೂ ಆಟ ಸಾಗಿದ್ದು ವಿಶೇಶ.

ಆದರೆ ಪಲಿತಾಂಶದಲ್ಲಿ ಇಂತಹ ಒಂದು ಬದಲಾವಣೆಯಾಗುವಲ್ಲಿ ಒಂದು ಎಡವಟ್ಟು ಕೆಲಸ ಮಾಡಿತ್ತು. ಒಂದು ವೇಳೆ ಆ ಎಡವಟ್ಟು ಆಗದೇ ಇದ್ದಿದ್ದರೆ ನಿಜಕ್ಕೂ ನಾವೊಂದು ಬೇರೆಯದೇ ಪಲಿತಾಂಶವನ್ನು ನೋಡಬಹುದಿತ್ತು. ಇವೆಲ್ಲಾ ನಡೆದಿದ್ದು 30 ಎಸೆತಗಟ್ಟಿನಲ್ಲಿ. ಮಾಲಿಂಗ ಪಾಲಾದ ಆ ಎಸೆತಗಟ್ಟಿನಲ್ಲಿ ಕೇವಲ 5 ಎಸೆತಗಳನ್ನು ಮಾತ್ರ ಎಸೆಯಲಾಗಿತ್ತು. ಆ ಎಸೆತಗಟ್ಟಿನ ವಿವರ ಹೀಗಿದೆ.

* 29.1 -ಮಾಲಿಂಗಾರ ನೇರ ಎಸೆತವನ್ನು ದೋನಿ **ಮೂರನೇ ಆಳಿನ** (Third man) ಕಡೆ ಬಾರಿಸುವ ಮೂಲಕ ಒಂಟಿ ಓಟ ಗಳಿಸಿದರು.
*29.2 -ಮಾಲಿಂಗಾರ **ಪುಟಿತೆಸೆತ**ವನ್ನು (Short ball) ಗಂಬೀರ್ **ಕಾಲಿಂದೆ** (Fine leg) ಬಾರಿಸುವ ಮೂಲಕ ನಾಲ್ಕು ಓಟದ ಎಲ್ಲೆ ದಾಟಿಸಿದರು.
*29.3 -ಮಾಲಿಂಗಾರ ನೇರ ಎಸೆತವನ್ನು **ಕಾಲಂಚಿ**ನಾಚೆ **(**Square leg) ಬಾರಿಸಿ ಒಂಟಿಓಟ ಗಳಿಸಿದರು.
*29.4 -ಮಾಲಿಂಗಾರ **ಹಾರೆಸತ**ವನ್ನು (Full toss) ದೋನಿ ಕಾಲಂಚಿನಾಚೆ ಬಾರಿಸುವ ಮೂಲಕ ಜಂಟಿ ಓಟ ಗಳಿಸಿದರು.
*29.5 -ಮಾಲಿಂಗಾರ ಬಲಬದಿಗೆ ವಾಲುತ್ತಿದ್ದ ಎಸೆತವನ್ನು ದೋನಿ ಮೂರನೆಯಾಳಿನ ಕಡೆ ದೂಡುವ ಮೂಲಕ ಮತ್ತು ಒಂಟಿ ಓಟ ಗಳಿಸಿದ್ದರು.

ಆದರೆ ತೀರ್ಪುಗಾರ ಇಲ್ಲಿಗೇ ಎಸೆತಗಟ್ಟುಗಳ ಮುಕ್ತಾಯ ಎಂದು ಗೋಶಿಸಿದ್ದರು. ಆ ಮೂಲಕ ಕೇವಲ ಅಯ್ದು ಎಸೆತಗಳಿಗೆ ಆ ಎಸೆತಗಟ್ಟು ಸೀಮಿತವಾಗುವ ಮೂಲಕ ಇಂಡಿಯಾ ಒಂದು ಎಸೆತದ ಕಳೆತ ಅನುಬವಿಸಿತ್ತು. ಬಹುಶ್ಯಹ ಆ ಒಂದು ಎಸೆತ ಎಸೆಯಲ್ಪಟ್ಟಿದ್ದರೆ ಪಲಿತಾಂಶದಲ್ಲಿ ಬದಲಾವಣೆಯಾಗುವ ಸಾದ್ಯತೆಯಿತ್ತು. ಇಂಡಿಯಾ ಆ ಎಸೆತದಲ್ಲಿ ಒಂದು ಓಟ ಗಳಸಿದ್ದರೆ ಪಯ್ಪೋಟಿ ಗೆಲ್ಲುತ್ತಿತ್ತು. ಅತವಾ ಒಂದು ಹುದ್ದರಿ ಕಳೆದುಕೊಂಡಿದ್ದರೆ ಆಟವನ್ನೂ ಕಯ್ ಚೆಲ್ಲುವ ಪರಿಸ್ತಿತಿ ಬಂದೊದಗುತಿತ್ತು. ಇದಲ್ಲದೇ ಆಟ ಬೇರೆಯದೇ ರೀತಿಯಲ್ಲಿಯೇ ಕೊನೆಗೊಳ್ಳುವ ಸಾದ್ಯತೆಯಿತ್ತು.


ಇನ್ನೊಂದು ವಿಶೇಶವೆಂದರೆ, ಈ ವರೆಗೆ ಬಹಳಶ್ಟು ಬಾರಿ ದಾಂಡಾಟ ಸಮಬಲದೊಂದಿಗೆ ಕೊನೆಗೊಂಡಿದೆ. ಆದರೆ ಈ ಪೋಟಿ ಮಾತ್ರ ಕೆಲವು ದಾಕಲೆಗಳಿಗೆ ಪಾತ್ರವಾಯಿತು. ಪೋಟಿ ಸಮಬಲಗೊಂಡಾಗ ಇತ್ತಂಡಗಳು ಸಮಾನ ಎಸೆತಗಟ್ಟುಗಳಲ್ಲಿ, ಸಮಾನ ಹುದ್ದರಿ ಕಳೆದುಕೊಂಡು, ಸಮಾನ **ಓಟಮಟ್ಟ**ದಲ್ಲಿ (Run rate), ಸಮಾನ ಓಟ ಗಳಿಸಿದ್ದು ಇದೇ ಮೊದಲು. ಇತರ ಪೋಟಿಗಳಂತೆಯೇ ಈ ಪೋಟಿಯಲ್ಲೂ ಯಾವುದಾದರೊಂದು ತಂಡದ ಪರವಾಗಿ ಪಲಿತಾಂಶ ಬಂದಿದ್ದರೆ ನಾವಿಂದು ಇದನ್ನು ನೆನಪಿಸಿಕೊಳ್ಳುವ ಹೊತ್ತು ಬರುತ್ತಿರಲಿಲ್ಲ. ತೀರ್‍ಪುಗಾರರ ಒಂದು ಸಣ್ಣ ಎಡವಟ್ಟು ಈ ಪೋಟಿಯನ್ನು ವಿಶೇಶ ಪೋಟಿಗಳಲ್ಲಿ ಒಂದರ ಸಾಲಿಗೆ ಸೇರಿಸಿದ್ದು ಮಾತ್ರ ವಿಪರ್‍ಯಾಸ.

***(ಚಿತ್ರ ಸೆಲೆ: cricdown.com )***

# ಹುತ್ತರಿಯ ಮುಂದೆ ಕಾಲು – ಹುಮುಂಕಾ (LBW)

**ದಾಂಡಾಟ** (ಕ್ರಿಕೆಟ್)! ಈ ಆಟ ಯಾರಿಗೆ ಗೊತ್ತಿಲ್ಲ ಹೇಳಿ? ಹದಿನೆಂಟನೇ ನೂರೇಡಿನಲ್ಲಿ ಇಂಗ್ಲೀಶರ ನಾಡಿನಲ್ಲಿ ಹುಟ್ಟಿದ ಈ ಆಟ, ಇಂದು ವಿಶ್ವದ ಹಲವೆಡೆ ತನ್ನ ಅಚ್ಚೊತ್ತಿ, ರಾರಾಜಿಸುತ್ತಿರುವುದು ನಮಗೆಲ್ಲರಿಗೂ ತಿಳಿದ ವಿಚಾರ. ಹೊರಾಂಗಣ ಆಟಕ್ಕೆ ಒಂದು ಉದಾಹರಣೆಯಾಗಿರುವ ದಾಂಡಾಟವು, ಪ್ರತಿ ತಂಡದಿಂದ ಹನ್ನೊಂದು ಆಟಗಾರರು ಇರುವಂತೆ ಎರಡು ತಂಡಗಳ ಮುಕಾಮುಕಿಯಲ್ಲಿ ಮೊದಲ್ಗೊಂಡು, ಸಾಗುತ್ತ ಸಾಗುತ್ತ ಅತ್ಯಂತ ರೋಚಕತೆಯಿಂದ ನೋಡುಗರನ್ನು ಸೆಳೆಯುವುದು ಈ ಆಟದ ಹಿರಿಮೆ. ಏಕೆಂದರೆ ಆಟ ಸಾಗಿದಂತೆ ಎಸೆತಗಾರನು ಪ್ರತಿ ಎಸೆತದಲ್ಲೂ**ದಾಂಡಿಗ**ನ (Batsman) ಹುತ್ತರಿಯ ಪಡೆಯುವ ಪ್ರಯತ್ನ ನಡೆಸಿದರೆ, ದಾಂಡಿಗನು ಪ್ರತಿ ಎಸೆತದಲ್ಲೂ ಓಟ ಗಳಿಸಲು ಎದುರು ನೋಡುತ್ತಿರುತ್ತಾನೆ.

ಇಂತಹ ಹೋರಾಟಗಳ ನಡುವೆ ದಾಂಡಾಟದ ರೋಚಕತೆಗಳಲ್ಲಿ ಹುತ್ತರಿಯನ್ನು ಕಳೆದುಕೊಳ್ಳುವುದೂ ಒಂದು. ಈ ಆಟದಲ್ಲಿ ಎರಡೂ ತಂಡಗಳ ಆಟಗಾರರು ಒಟ್ಟು ಹನ್ನೊಂದು ಬಗೆಯ ಸಾದ್ಯತೆಗಳಲ್ಲಿ **ಹುತ್ತರಿ**ಗಳನ್ನು (Wicket) ಕಳೆದುಕೊಳ್ಳಬಹುದು. ಉದಾಹರಣೆಗೆ**ಚೆಂಡಿಡಿತ** (Caught), **ಬಡಿದಗೂಟ** (Bowled), **ಹುತ್ತರಿಯ ಮುಂದೆ ಕಾಲು- ಹುಮುಂಕಾ** (LBW– Leg Before Wicket), **ಓಟದಿ ಹುತ್ತರಿಕಳೆತ** (Run out), **ಗೂಟಹೊಡೆತ** (Stumped), **ಗೂಟಕ್ಕೆ ಬಡಿತ** (Hit wicket), **ಚೆಂಡು ತಡೆತ** (Handled the ball), **ಮರು ಚೆಂಡೊಡೆತ** (Hit the ball twice), **ಬಯಲಿಗೆ ತೊಡಕು** (Obstructing the field), **ಕಾಲ ಕಳೆತ** (Timed out), **ಗಾಯಾಳಾಗು** (Retired hurt). ಆದರೆ ಇವುಗಳಲ್ಲಿ ಹುತ್ತರಿಯ ಮುಂದೆ ಕಾಲು ಇಲ್ಲವೇ ಚಿಕ್ಕದಾಗಿ 'ಹುಮುಂಕಾ'ದ ಮೂಲಕ ಆಟಗಾರ ತನ್ನ ಹುತ್ತರಿ ಕಳೆದುಕೊಳ್ಳುವಲ್ಲಿ ತೀರ್ಪುಗಾರರ (Umpire) ಪಾತ್ರ ಹೆಚ್ಚಿನದ್ದಾಗಿರುತ್ತದೆ. ಏಕೆಂದರೆ ಇಲ್ಲಿ **ಎಸೆತಗಾರ**ನು (Bowler) ದಾಂಡಿಗನನ್ನು (Batsman) ಕಟ್ಟಿಹಾಕುವಲ್ಲಿ ತೋರಬೇಕಾದ ಚಳಕದಶ್ಟೇ ಮುಕ್ಯ ತೀರ್ಪುಗಾರನ ಬುದ್ದಿವಂತಿಕೆ ಕೂಡ. ಹಾಗಾಗಿ ಹುಮುಂಕಾ ತೀರ್ಪುಗಾರನ ಬುದ್ದಿವಂತಿಕೆಗೆ ಹಿಡಿದ ಕನ್ನಡಿಯಾಗಿರುತ್ತದೆ.





ಸಾಮಾನ್ಯವಾಗಿ ದಾಂಡಿಗ ತನ್ನ ಹುತ್ತರಿಯನ್ನು ಕಳೆದುಕೊಳ್ಳುವುದನ್ನು ತಪ್ಪಿಸಲು ಹತ್ತು ಹಲವು ತರದ ದಾರಿಯನ್ನು ಹಿಡಿಯುತ್ತಾನೆ. ದಾಂಡಾಟ ಹುಟ್ಟಿದ ಮೊದಲಿಗೆ ದಾಂಡಿಗ ಹುತ್ತರಿಯ ಕಡೆಗೆ ಬರುವ ಚೆಂಡನ್ನು ತಡೆಯಲು ನಾನಾ ಕಸರತ್ತುಗಳನ್ನು ಶುರುವಿಟ್ಟನು. ಅದರಲ್ಲಿ ಒಂದು, ಹುತ್ತರಿಯ ಕಡೆಗೆ ಬರುವ ಚೆಂಡನ್ನು ತಡೆಯಲು ದಾಂಡಿಗ ತನ್ನ ಕಾಲುಗಳನ್ನು ಬಳಸುವುದು. ಇದರಿಂದ ಎಸೆತಗಾರರ ಮೇಲೆ ದಾಂಡಿಗರ ಮೇಲಾಟ ಪ್ರಾರಂಬವಾಯಿತು. ಇದರಿಂದ

ಎಸೆತಗಾರರು ಹುತ್ತರಿಯನ್ನು ಪಡೆಯುವುದು ಸವಾಲಾಗಿ ಪರಿಣಮಿಸಿದ್ದರಿಂದ ಎಸೆತಗಾರರು ಪರದಾಡುವಂತಾಯಿತು. ಇದು ಹುಮುಂಕಾ (LBW) ಎಂಬ ನಿಯಮದ ಹುಟ್ಟಿಗೆ ಕಾರಣವಾಯಿತು.


ಹುಮುಂಕಾ ನಿಯಮವನ್ನು ಮೊಟ್ಟ ಮೊದಲ ಬಾರಿಗೆ 1774ರಲ್ಲಿ ಜಾರಿಗೆ ತರಲಾಯಿತು. ಮುಂದೆ 1935ರಲ್ಲಿ ಈ ನಿಯಮದಲ್ಲಿ ಕೊಂಚ ಬದಲಾವಣೆಗಳನ್ನು ತರಲಾಯಿತು. ಅದರಂತೆ **ಬಲಹುತ್ತರಿ**ಯ (Off stump) ಗೆರೆಯ ಆಚೆ ಬಿದ್ದು ಹುದ್ದರಿಯ ಕಡೆ ಬರುವ ಚೆಂಡುಗಳಿಗೆ ಕೂಡ **ಹುತ್ತರಿಕಳೆತ** (Out) ಎಂದು ಗೋಶಿಸಲಾಯಿತು. ಇದು ದಾಂಡಿಗನನ್ನು ಗೊಂದಲಕ್ಕೀಡು ಮಾಡಿದರೆ, ಈ ನಿಯಮದ ಲಾಬವನ್ನು **ಎಡ ತಿರುಗಿಸುಗರು** (Leg spinner) ಬಳಸಲಾರಂಬಿಸಿದರು. ಇದು 1972ರ ಕೆಲವು ನಿರ್ಣಾಯಕ ಚರ್ಚೆಗಳು ಮತ್ತು ಅರಕೆಗಳಿಗೆ ಕಾರಣವಾಯಿತು.

ಆದರೆ ಮುಂದೆ 1990 ರಲ್ಲಿ ಕೆಲವು ಪರಿಣಾಮಕಾರಿ ಚಳಕದ ಸಹಾಯದಿಂದ ತರಲಾದ ನಿಯಮದಲ್ಲಿನ ಕೆಲವು ಬದಲವಣೆಗಳು, ಕ್ರಿಕೆಟ್ ನ ಎಲ್ಲಾ ವಿಬಾಗಗಳಲ್ಲೂ ತ್ರುಪ್ತಿದಾಯಕವಾಗಿ ಗೋಚರಿಸಿತು. ಹೆಚ್ಚಾಗಿ ದಾಂಡಿಗ ಚೆಂಡನ್ನು **ಕಾಪೊಡೆತ** (Defence), **ಬಾಚೊಡೆತ** (Sweep shot), **ತಿರು ಬಾಚೊಡೆತ** (Reverse Sweep), **ತಿರುಹೊಡೆತ** (Switch hit), **ತೋಡೊಡೆತ** (Scoop Shot) ಬೀಸುವ ಹೊತ್ತಲ್ಲಿ ದಾಂಡಿಗ ಚೆಂಡನ್ನು ಕೆಣಕುವಲ್ಲಿ ವಿಪಲವಾದಾಗ, ಚೆಂಡು ದಾಂಡಿಗನ ಕಾಲಿಗೆ ಬಡಿದರೆ ಹುಮುಂಕಾ ನಿಯಮಗಳನ್ನು ತೀರ್ಪುಗಾರರು ಬಳಸಿಕೊಳ್ಳುತ್ತಾರೆ. ಅದರಂತೆ ಹುಮುಂಕಾದ ನಿಯಮಗಳು ಹೀಗಿವೆ.


- ಎಸೆತಗಾರ ಎಸೆದ ಚೆಂಡು ಒಂದು ವೇಳೆ ದಾಂಡಿಗನ ಕಾಲಿಗೆ ಬಡಿದರೆ **ಬಯಲಿಕೆ**ಯ (fielding) ತಂಡ ತೀರ್ಪುಗಾರರಲ್ಲಿ ಕಡ್ಡಾಯವಾಗಿ ಮನವಿ ಸಲ್ಲಿಸಬೇಕು.
- ಎಸೆತಗಾರ ಎಸೆದ ಚೆಂಡು ದಾಂಡುಗಾರನ ಕಾಲಿಗೆ ಬಡಿಯುವ ಮುನ್ನ ಯಾವುದೇ ಕಾರಣಕ್ಕೂ **ದಾಂಡಿಗೆ** (Bat) ತಗುಲಿರಬಾರದು. (ಕೆಳಗೆ ನೀಡಿರುವ ಚಿತ್ರ ನೋಡಿ)



- ಎಸೆತಗಾರ ಎಸೆದ ಚೆಂಡು ಎರಡೂ ಬದಿಯ ಹುತ್ತರಿಯ ನಡುವೆ ಎಳೆದ ಕಾಲ್ಪನಿಕ ಗೆರೆಯ ನಡುವೆ ಕಾಲಿಗೆ ತಾಕಿ, ಹುತ್ತರಿಗೆ ಬಡಿಯುವಂತಿರಬೇಕು. (ಕೆಳಗೆ ನೀಡಿರುವ ಚಿತ್ರ ನೋಡಿ)




- ಕೆಲವೊಮ್ಮೆ ಚೆಂಡು ಕಾಲ್ಪನಿಕ ಗೆರೆಯ ನಡುವೆ ಕಾಲಿಗೆ ಬಡಿದರೂ ಕೂಡ ಹುತ್ತರಿಯ ಮೇಲಿನಿಂದ ಹೋಗುವಂತ್ತಿದ್ದರೆ ಅದು ಹುಮುಂಕಾ ಆಗಿರುವುದಿಲ್ಲ.
- ಕೆಲವೊಮ್ಮೆ ಎಸೆತಗಾರನ **ತೇಲುವ ಎಸೆತ**ಗಳಿಂದ (Swinging ball) ತಪ್ಪಿಸಿಕೊಳ್ಳಲು, **ದಾಂಡಿಗ ಗಡಿಗೆರೆ** ಗಿಂತ (Crease) ಕೊಂಚ ಮುಂದೆ ಬಂದು ದಾಂಡು ಬೀಸಲು ಪ್ರಯತ್ನಿಸುತ್ತಾನೆ. ಅಂತಹ ಸಂದರ್ಬದಲ್ಲಿ ಚೆಂಡು ದಾಂಡಿಗನ ಕಾಲಿಗೆ ಬಡಿದರೆ, ಚೆಂಡು ಕಾಲಿಗೆ ಬಡಿಯುವಾಗ ದಾಂಡಿಗನು ಹುತ್ತರಿಯಿಂದ ಎಶ್ಟು ದೂರದಲ್ಲಿದ್ದಾನೆ? ಎಂಬುದು ಕೂಡ ತೀರ್ಪಿನಲ್ಲಿ ಮುಕ್ಯ ಪಾತ್ರ ವಹಿಸುತ್ತದೆ. (ಕೆಳಗೆ ನೀಡಿರುವ ಚಿತ್ರ ನೋಡಿ)



- ಇದಲ್ಲದೇ, ತೀರ್ಪುಗಾರರು ಚೆಂಡಿನ **ತಿರುಗುವಿಕೆ** (Spin) ಹಾಗು ಚೆಂಡು ದಾಂಡಿಗನ ಹತ್ತಿರ ಹೋಗುವಾಗ ಯಾವ ಕಡೆ ವಾಲುತ್ತಿದೆ ಎಂಬುದನ್ನು ಗಮನದಲ್ಲಿರಿಸಿಕೊಂಡು ತೀರ್ಪನ್ನು ನೀಡುತ್ತಾರೆ.

ಹೀಗೆ ಒಂದು ಹುಮುಂಕಾದ ತೀರ್ಪಿನ ಹಿಂದೆ ತೀರ್ಪುಗಾರರು ಕೆಲವೇ ಸೆಕೆಂಡುಗಳಲ್ಲಿ ಹಲವು ನಿಯಮಗಳನ್ನು ಪರಿಶೀಲಿಸಿ ಒಂದು ತೀರ್ಪನ್ನು ನೀಡಬೇಕಾಗುತ್ತದೆ. ಹಲವು ಸಂದರ್ಬಗಳಲ್ಲಿ ತೀರ್ಪುಗಾರರಿಗೆ ಇದು ದೊಡ್ಡ ಸವಾಲಾಗಿರುತ್ತದೆ.

***(ಮಾಹಿತಿ ಸೆಲೆ:** wikipedia**)***

***(ಚಿತ್ರ ಸೆಲೆ:** news.bbc.co**)***